ಕರ್ನಾಟಕ ವಿಧಾನಸಭೆ

ಗುರುವಾರ 1ನೇ ಆಗಸ್ಟ್ 2002 ರಂದು

ಸದನವು ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪರವರು ಪೀಠದಲ್ಲಿ ಉಪಸ್ಥಿತರಿದ್ದರು

1. ಸಂತಾಪ ಸೂಚನೆಗಳು

ಮಾನ್ಯ ಸಭಾಧ್ಯಕ್ಷರು :

ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಎಸ್. ಪುಟ್ಟಸ್ವಾಮಿ ಹಾಗೂ ಶ್ರೀ ಪಂಪಾಪತಿ, ಅವರುಗಳು ನಿಧನರಾಗಿರುವುದನ್ನು ಸದನಕ್ಕೆ ವಿಷಾದದಿಂದ ತಿಳಿಸುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್. ಪುಟ್ಟಸ್ವಾಮಿ ಅವರು ದಿನಾಂಕ 3ನೇ ಮೇ, 1925 ರಂದು ಚಾಮರಾಜನಗರ ಜಿಲ್ಲೆಯ ಬಿಸಲ್‌ವಾಡಿಯಲ್ಲಿ ಜನಿಸಿ, ವೃತ್ತಿಯಲ್ಲಿ ವಕೀಲರಾಗಿದ್ದರು. ಜಿಲ್ಲಾ ಮತ್ತು ತಾಲ್ಲೂಕು ಮಂಡಳಿ ಸದಸ್ಯರಾದ ಶ್ರೀಯುತರು ಬಡವರ ಏಳಿಗೆಗಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಶ್ರೀಯುತರು 4ನೇ, 5ನೇ, 7ನೇ ಹಾಗೂ 8ನೇ ವಿಧಾನ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಶ್ರೀಯುತರು ದಿನಾಂಕ 31-7-2002 ರಂದು ನಿಧನ ಹೊಂದಿದರು.

ಶ್ರೀ ಪಂಪಾಪತಿ

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪಂಪಾಪತಿ ಅವರು 1ನೇ ಮೇ, 1927 ರಲ್ಲಿ, ಜನಿಸಿದ್ದು, ಕಾರ್ಮಿಕ ಮುಖಂಡರಾಗಿ, ಸಾಮಾಜಿಕ ಸೇವಕರಾಗಿ, ಹಲವಾರು ಕಾರ್ಮಿಕ ಸಂಘಗಳ ಜೊತೆ ಸಂಬಂಧ ಹೊಂದಿದ್ದರು. ದಾವಣಗೆರೆಯ ಅನೇಕ ಮಿಲ್ಲಿನ ಗಿರಣಿಗಳ ಮತ್ತು ಇತರೆ ಔದ್ಯೋಮಿಕ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸಿದ್ದ ಶ್ರೀಯುತರು ಕಾರ್ಮಿಕರ ಕುಂದುಕೊರತೆಗಳನ್ನು ನಿವಾರಿಸುವಲ್ಲಿ ಶ್ರಮಿಸಿದ್ದು, "ಕಾಮರೇಡ್ ಪಂಪಾಪತಿ" ಎಂದೇ ಹೆಸರುಗಳಿಸಿದ್ದರು. ಶ್ರೀಯುತರು ಹೊರದೇಶಗಳಿಗೂ ಭೇಟಿ ನೀಡಿದ್ದರು. ದಾವಣಗೆರೆಯ ವಿಧಾನ ಸಭಾ ಕ್ಷೇತ್ರದ "ಸಿಪಿಐ" ಪಕ್ಷದಿಂದ ಆರನೇ, ಏಳನೇ ಮತ್ತು ಎಂಟನೇ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 31-7-2002 ರಂದು ನಿಧನ ಹೊಂದಿದರು.

+ ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಇಬ್ಬರು ಮಾಜಿ ಸದಸ್ಯರುಗಳು ನಿಧನದಿಂದ ನಮಗೆಲ್ಲರಿಗೂ ಬಹಳ ದುಃಖವಾಗಿದೆ. ಇಬ್ಬರೂ ನಮಗೆ ಆತ್ಮೀಯರಾಗಿದ್ದಂಥವರು. ನಮ್ಮೆಲ್ಲರ ಗೌರವ, ವಿಶ್ವಾಸ, ಪ್ರೀತಿ ಇವುಗಳಿಗೆ ಪಾತ್ರರಾಗಿದ್ದರು. ಶ್ರೀ ಪುಟ್ಟಸ್ವಾಮಿಯವರು ನಮ್ಮ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದರು. ಒಂದು ಕಾಲದಲ್ಲಿ ಅಂದರೆ, 1970 ರ ದಶಕದಲ್ಲಿ ಒಂದು ರೀತಿಯ ಪೋಲರೈಸೇಷನ್ ನಡೆಯುತ್ತಿದ್ದ ಕಾಲದಲ್ಲಿ ಬಹಳ ಭರವಸೆಗಳನ್ನು ಹುಟ್ಟಿಸಿದಂಥ ಒಬ್ಬ ಯುವ ನಾಯಕರಾಗಿದ್ದರು. ವಿಧಾನ ಸಭೆಯಲ್ಲಿ ನಮ್ಮ ಜೊತೆಯಲ್ಲಿ ಸೇವೆ ಸಲ್ಲಿಸಿದ್ದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ, ಮೈಸೂರು ಜಿಲ್ಲೆಯಲ್ಲಿ

ಕಾಂಗ್ರೆಸ್ಸಿನ ಬೇರುಗಳನ್ನು ಭದ್ರಪಡಿಸಲಿಕ್ಕೆ ಅವರು ನಿರಂತರವಾದ ಪ್ರಯತ್ನಗಳನ್ನು ಮಾಡಿದರು. ಒಣ ಪ್ರದೇಶಗಳಾದಂಥ ಚಾಮರಾಜನಗರ ಜಿಲ್ಲೆಯ ಸಮಸ್ಯೆಗಳೆಲ್ಲವನ್ನೂ ಕೂಡ ಸದನದಲ್ಲಿ ಬಹಳ ನೊಂದ ಮನಸ್ಸಿನಿಂದ ಆಗಿಂದಾಗ್ಗೆ ನಮ್ಮ ಗಮನವನ್ನು ಸೆಳೆಯುತ್ತಿದ್ದರು. ಇತ್ತೀಚೆಗೆ ಅವರು ಎಕ್ಸಿಬಿಷನ್ ಕಮಿಟಿಯ ಅಧ್ಯಕ್ಷರಾಗಿ ಮೈಸೂರಿನಲ್ಲಿ ಸೇವೆ ಸಲ್ಲಿಸಿದ್ದರು. ಕಳೆದ ನಾಲ್ಕಾರು ವರ್ಷಗಳಿಂದ ಅವರ ಆರೋಗ್ಯ ಗಣನೀಯವಾಗಿ ಕೆಟ್ಟು ಹೋಗಿತ್ತು. ಆದರೂ ಇಷ್ಟು ಬೇಗ ಅವರ ಅಗಲಿಕೆ ಬರುತ್ತದೆಂದು ನಾವು ನೆನಸಿರಲಿಲ್ಲ.

ಪಂಪಾಪತಿಯವರು ದಾವಣಗೆರೆ ಮಿಲ್ಲಿನ ಮತ್ತು ಗಿರಣಿಗಳ ಶ್ರಮಕಾರ ಬಂಧುಗಳನ್ನು ಸಂಘಟನೆ ಮಾಡಿ, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾಗೆ ಹೆಚ್ಚಿನ ಶಕ್ತಿಯನ್ನು ಅವರು ತಂದುಕೊಟ್ಟಿದ್ದರು. ಇವತ್ತಿನ ದಿನಗಳಲ್ಲಿ, ಹಿಂದಿನ ದಿನಗಳನ್ನು ನೋಡಿದಾಗ, ಅವರು ಅಂದು ಏನು ಸಂಘಟನೆಗೆ ಪ್ರಯತ್ನ ಪಟ್ಟರು, ಆ ಸಂಘಟನೆಯಲ್ಲಿ ಏನು ಯಶಸ್ಸನ್ನು ಸಾಧಿಸಿ, ವಿಧಾನ ಸಭೆಗೆ ಬಂದರು, ಅದು ಒಂದು ಸಾಧಾರಣವಾದಂಥ ಬೆಳವಣಿಗೆ ಎಂದು ನಾನು ಭಾವಿಸುವುದಿಲ್ಲ. ಆ ಬೆಳವಣಿಗೆಗೆ ಒಂದು ವಿಶಿಷ್ಟವಾದಂಥ ಐತಿಹಾಸಿಕ ತೆರೆ ಇದೆ. ಅಂತಹ ಒಂದು ಐತಿಹಾಸಿಕ ತೆರೆಯ ರೂವಾರಿಯಾಗಿದ್ದರು ಕಾಮ್ರೇಡ್ ಪಂಪಾಪತಿಯವರು. ಪಕ್ಷದ ಸಿದ್ಧಾಂತವನ್ನು ಕೊನೆಯ ಉಸಿರು ಇರುವವರೆಗೂ ಕೂಡ ಅವರು ನಂಬಿ, ಆ ಸಿದ್ಧಾಂತಕ್ಕೆ ಅಂಟಿಕೊಂಡು, ಆ ಸಿದ್ಧಾಂತಕ್ಕೆ ಸೇವೆ ಮಾಡಿದ್ದಾರೆ. 6,7 ಮತ್ತು ಹಿನೇ ವಿಧಾನ ಸಭೆಯಲ್ಲಿ ಅವರು ಈ ರಾಜ್ಯದ ಒಟ್ಟಾರೆ ಚಿಂತನೆಯನ್ನು, ಅವರು ಮಾಡಿದಂಥ ಹತ್ತು ಹಲವಾರು ಭಾಷಣಗಳಲ್ಲಿ ನಾವು ಕಂಡುಕೊಳ್ಳಬಹುದಾಗಿದೆ. ಈ ಇಬ್ಬರ ಅಗಲುವಿಕೆಯಿಂದ ನಮಗೆಲ್ಲರಿಗೂ ದೊಡ್ಡ ಆಘಾತವುಂಟಾಗಿದೆ. ನನ್ನ ಪರವಾಗಿ, ಸರ್ಕಾರದ ಪರವಾಗಿ, ನಮ್ಮ ಪಕ್ಷದ ಪರವಾಗಿ ಮೃತರಿಗೆ ನಮ್ಮ ಗೌರವಗಳನ್ನು ಸೂಚಿಸಿ, ನಮ್ಮ ಶ್ರದ್ಧಾಂಜಲಿಯನ್ನು ಅವರಿಗೆ ಅರ್ಪಿಸುತ್ತೇವೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಎಸ್. ಪುಟ್ಟಸ್ವಾಮಿಯವರು ಮತ್ತು ಪಂಪಾಪತಿಯವರ ಮರಣದಿಂದ ಇವತ್ತು ಸಮಾಜಕ್ಕೆ ಭಾರಿ ನಷ್ಟವಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಪುಟ್ಟಸ್ವಾಮಿಯವರ ಬಗ್ಗೆ ಹೇಳುವಂಥಾದ್ದು, ಅವರು ನಾಲ್ಕು ಸಲ ವಿಧಾನ ಸಭೆಗೆ ಆರಿಸಿ ಬಂದಂಥವರು. ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂಥ ವ್ಯಕ್ತಿಯಾಗಿದ್ದರು. ಇನ್ನೊಂದು ಪ್ರಮುಖವಾಗಿ ನಾನು ಪತ್ರಿಕೆಗಳಲ್ಲಿ ಓದಿದ್ದು, ಅವರು ನಾಲ್ಕು ಸಲ ವಿಧಾನ ಸಭೆಗೆ ಆಯ್ಕೆಯಾಗಿದ್ದರೂ, ಯಾವುದೇ ಒಂದು ಸಂದರ್ಭದಲ್ಲಿ ಅದಕ್ಕಿಂತ ಹೆಚ್ಚಿನ ಸ್ಥಾನಮಾನ ಅಂದರೆ ಸಚಿವ ಸ್ಥಾನಮಾನ ಅಥವಾ ಇನ್ನಿತರ ಸ್ಥಾನಮಾನಕ್ಕೆ ಆಗಲೀ ಅವರು ಎಂದು ಹೋರಾಟವನ್ನು ಮಾಡಿರಲಿಲ್ಲ ಎನ್ನುವಂಥಾದ್ದು ಪ್ರಮುಖವಾದ ಅಂಶ. ಏಕೆಂದರೆ, ಇವತ್ತು ವಿಧಾನ ಸಭೆಗೆ ಒಂದು ಸಲ, ಎರಡು ಸಲ ಆರಿಸಿ ಬಂದಂಥ ಶಾಸಕರು ಸಚಿವ ಪದವಿ ಸಲುವಾಗಿ ಪ್ರಯತ್ನ ಮಾಡುವುದನ್ನು, ಹೋರಾಟ ಮಾಡುವುದನ್ನು ನೋಡುವಂಥ ಈ ಸಂದರ್ಭದಲ್ಲಿ, ಇವತ್ತು ಪುಟ್ಟಸ್ವಾಮಿಯವರು ವಿಧಾನ ಸಭೆಗೆ ನಾಲ್ಕು ಸಲ ಆರಿಸಿ ಬಂದಿದ್ದರೂ ಕೂಡ ಯಾವುದೇ ಸ್ಥಾನಮಾನಕ್ಕೆ ಪ್ರಯತ್ನ ಮಾಡಿರಲಿಲ್ಲವೆಂಬುದು ಅವರ ಆದರ್ಶತೆಯನ್ನು ತೋರಿಸುತ್ತದೆ. ಆ ಆದರ್ಶತೆಯನ್ನು ಪಾಲಿಸುವಂಥಾದ್ದು ನಮ್ಮೆಲ್ಲರ ಕರ್ತವ್ಯವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶ್ರೀಯುತ ಪಂಪಾಪತಿಯವರು ಇವರ ಬಗ್ಗೆ ಇಡೀ ಕರ್ನಾಟಕಕ್ಕೇ ಗೊತ್ತು. ಅವರು ದಾವಣಗೆರೆಯಿಂದ

ವಿಧಾನ ಸಭೆಗೆ ಮೂರು ಸಲ ಆರಿಸಿ ಬಂದಿದ್ದರೂ, ಕಮ್ಯುನಿಸ್ಟ್ ಚಳುವಳಿಯಲ್ಲಿ ಮತ್ತು ಕಾರ್ಮಿಕ ಚಳುವಳಿಯಲ್ಲಿ, ಕಾರ್ಮಿಕರನ್ನು ಸಂಘಟನೆ ಮಾಡುವುದರಲ್ಲಿ ಇಡೀ ಕರ್ನಾಟಕಕ್ಕೆ ಚಿರಪರಿಚಿತರಾದಂಥ ಒಂದು ವ್ಯಕ್ತಿತ್ವ ಅವರದು. ಕೇವಲ ದಾವಣಗೆರೆಯಲ್ಲಿ ಮಾತ್ರ ಕಾರ್ಮಿಕರನ್ನು ಸಂಘಟಿಸಿ ಹೋರಾಟ ಮಾಡಲಿಲ್ಲ. ಹುಬ್ಬಳಿ - ಧಾರವಾಡದಲ್ಲಿರಬಹುದು, ಎಲ್ಲೇ ಕಾರ್ಮಿಕರಿಗೆ ತೊಂದರೆಯಾದಂಥ ಸಂದರ್ಭದಲ್ಲಿ, ಕಾರ್ಖಾನೆಗಳ ಮಾಲೀಕರು ಕಾರ್ಮಿಕರಿಗೆ ಶೋಷಣೆ ಮಾಡುವಂಥ ಸಂದರ್ಭದಲ್ಲಿ, ಕಾರ್ಮಿಕರಿಗೆ ಆದಂಥ ಅನ್ಯಾಯದ ವಿರುದ್ಧ ಹೋರಾಟವನ್ನು ಸಂಘಟಿಸುವುದರಲ್ಲಿ ಪಂಪಾಪತಿಯವರು ಎತ್ತಿದ ಕೈ ಎಂದು ಹೇಳಬಹುದು. ಹೀಗಾಗಿ ಅವರು ಮಾಡಿರುವ ಹಲವಾರು ಹೋರಾಟಗಳನ್ನು ನಾನು ವೈಯಕ್ತಿಕವಾಗಿ ನೋಡಿದ್ದೇನೆ. ಪಂಪಾಪತಿಯವರು ಕೊನೆಯ ಉಸಿರು ಇರುವವರೆಗೂ ಕಾರ್ಮಿಕರಿಗೇನು ಅನ್ಯಾಯವಾಗಿದೆ ಶೋಷಣೆಯಾಗಿದೆ ಅದರ ವಿರುದ್ಧ ಧ್ವನಿಯನ್ನು ಎತ್ತಿರುವುದು ಅವರ ವೈಶಿಷ್ಟ್ಯವಾದಂಥ ವ್ಯಕ್ತಿತ್ವ. ಮತ್ತೊಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.ಹಿಂದೆ ಕಮ್ಯುನಿಸ್ಟ್ ನಾಯಕರು ತೀರಿಕೊಂಡಂಥ ಸಂದರ್ಭದಲ್ಲಿ ಮತ್ತು ಮಾಜಿ ಶಾಸಕರು ತೀರಿಕೊಂಡಂಥ ಸಂದರ್ಭದಲ್ಲಿ ಈ ಸದನದಲ್ಲಿಯೇ ಪ್ರಸ್ತಾಪ ಮಾಡಿದ್ದೆ. ಇತ್ತೀಚಿನ ವರ್ಷಗಳಲ್ಲಿ ಕಾರ್ಮಿಕರ ಕೂಗನ್ನು ಹಾಕುವಂಥಾದ್ದು, ಕಾರ್ಮಿಕರ ಧ್ವನಿಯನ್ನು ಎತ್ತುವಂಥಾದ್ದು, ಇದಕ್ಕೆ ವಿಧಾನ ಸಭೆಯಲ್ಲಿ ಪ್ರಾತಿನಿಧ್ಯ ಇಲ್ಲವೆನ್ನುವಂಥಾದ್ದು. ಇವತ್ತು ಅವರೇ ಆಗಬಹುದು ಅಥವಾ ಯಾವುದೇ ಕಾರ್ಮಿಕ ನಾಯಕರಾಗಬಹುದು, ಅವರು ಯಾವುದೇ ಪಕ್ಷದಿಂದ ಇರಬಹುದು. ಕಾರ್ಮಿಕ ಸಂಘಟನೆಯಲ್ಲಿ ತೊಡಗಿಸಿಕೊಂಡು, ಕಾರ್ಮಿಕ ನಾಯಕರಾಗಿ ಇದ್ದಂಥವರು ಇವತ್ತು ಇಲ್ಲಿ ಪ್ರಾತಿನಿಧ್ಯವಿಲ್ಲವೆನ್ನುವಂಥ ಕೂಗು ಇದೆ. ಹೀಗಾಗಿ ಕಾರ್ಮಿಕರ ಹಿತಾಸಕ್ತಿಗೆ ಪೂರಕವಾಗುವಂಥ, ಧ್ವನಿ ಎತ್ತುವಂಥ ಕೆಲಸ ಸದನದಲ್ಲಿ ಕಡಿಮೆಯಾಗಿದೆ ಎಂಬುದು ನಮಗೆ ಎದ್ದು ಕಾಣುವಂತಾದ್ದು. ಇವರ ಬಗ್ಗೆ ಚಿಂತನೆಯಾಗಲಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹೇಳಿ, ಪಂಪಾಪತಿಯವರು ಮತ್ತು ಪುಟ್ಟಸ್ವಾಮಿಯವರೇನು ತೀರಿಕೊಂಡಿದ್ದಾರೆ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ನಮ್ಮ ಪಕ್ಷದ ಪರವಾಗಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಣೆ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ): ಮಾನ್ಯ ಸಭಾಧ್ಯಕ್ಷರೇ, ತಾವು ಮಂಡಿಸಿರತಕ್ಕಂಥ ಈ ಸಂತಾಪ ಸೂಚನೆಗೆ ನಾವು ಧ್ವನಿಗೂಡಿಸಿ, ಮಾನ್ಯ ಪುಟ್ಟಸ್ವಾಮಿಯವರು ಅವಿಭಾಜಿತ ಮೈಸೂರು ಜಿಲ್ಲೆಯ ಏಳಿಗೆಗೋಸ್ಕರ, ಅಲ್ಲಿಯ ನೀರಾವರಿ ಯೋಜನೆಗಳಿಗೋಸ್ಕರ ದುಡಿದಂಥ ಪ್ರಾಮಾಣಿಕ ಹಾಗೂ ನಿಷ್ಠಾವಂತ ನಾಯಕರಾಗಿದ್ದರು. ಅವರು ವಿಧಾನ ಸಭೆಯ ಸದಸ್ಯರಾಗಿದ್ದ ಸಂದರ್ಭದಲ್ಲಿಯೂ ಸಹಿತ, ನಾವೆಲ್ಲಾ ಆಡಳಿತ ಪಕ್ಷದಲ್ಲಿದ್ದಂಥ ಸಂದರ್ಭ ಆದು. ಯಾವುದೇ ರೀತಿಯ ಮುಲಾಜುಗಳಿಗೆ ಒಳಗಾಗದ ಹಾಗೆ ಅತ್ಯಂತ ಪ್ರಾಮಾಣಿಕವಾಗಿ ತಮ್ಮ ಕ್ಷೇತ್ರದ ಜನತೆಯ ಬಗ್ಗೆ ಬಹಳ ಕಾಳಜಿಯನ್ನು ಇಟ್ಟುಕೊಂಡಿದ್ದ ಒಬ್ಬ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ್ದ ನಾಯಕರಾಗಿದ್ದರು. ಬಹಳ ಸ್ನೇಹಮಯಿಗಳಾಗಿದ್ದರು. ಕಳೆದ ಮೂರು ನಾಲ್ಕು ವರ್ಷಗಳಿಂದ ಅವರು ಬಹಳ ಅನಾರೋಗ್ಯದಿಂದ ಬಳಲಿದ್ದರು. ಆದರೂ ಕೂಡ ಜಿಲ್ಲೆಯ, ಜನತೆಯ, ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಅವರಲ್ಲಿದ್ದ ಕಾಳಜಿಯು ಅಪರೂಪದ್ದು. ನಾಲ್ಕು ಬಾರಿ ಚಾಮರಾಜನಗರ ಕ್ಷೇತ್ರದಿಂದ ವಿಧಾನಸಭೆಗೆ ಆರಿಸಿ ಬಂದು ಜನಗಳ ವಿಶ್ವಾಸವನ್ನು

ಗಳಿಸಿಕೊಂಡಿದ್ದಂಥ ವ್ಯಕ್ತಿಯನ್ನು ಇವೊತ್ತು ನಾವು ಕಳೆದುಕೊಂಡಿರತಕ್ಕಂಥಾದ್ದು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಷ್ಟೇ ಅಲ್ಲ, ಅವರನ್ನು ಬಲ್ಲಂಥ ನಮ್ಮೆಲ್ಲರಿಗೂ ಕೂಡ ಒಬ್ಬ ಅತ್ಯಂತ ಆತ್ಮೀಯ ಸ್ನೇಹಿತರನ್ನು ಕಳೆದುಕೊಂಡಿದ್ದೇವೆ, ಎನ್ನತಕ್ಕ ಭಾವನೆ ಮೂಡಿಬರುತ್ತದೆ. ಅವರಲ್ಲಿದ್ದ ಸಜ್ಜನಿಕೆ ಪ್ರಾಮಾಣಿಕತೆ, ಮುಂತಾದವುಗಳು ನಾವೆಲ್ಲರೂ ಅನುಕರಣೆ ಮಾಡತಕ್ಕಂಥವುಗಳಾಗಿವೆ ಎಂದು ನಾನು ಭಾವಿಸಿದ್ದೇವೆ.

ಪಂಪಾಪತಿಯವರ ನಿಧನದಿಂದ ನಮ್ಮ ವಿಧಾನಸಭೆಯಲ್ಲಿನ ಕಾರ್ಮಿಕರ ಮುಖಂಡರ ಕೊರತೆ ಅಷ್ಟೇ ಅಲ್ಲ, ಇಡೀ ಕರ್ನಾಟಕದಲ್ಲಿ ಹಾಗೂ ದೇಶದಲ್ಲಿ ಕಾರ್ಮಿಕ ಮುಖಂಡರ, ನಾಯಕತ್ವದ, ಕೊರತೆಯನ್ನು ನಾವು ಕಾಣುತ್ತಾ ಇದ್ದೇವೆ. ಅವರು ಮೂರು ಬಾರಿ ವಿಧಾನಸಭೆಗೆ ಸಾಮಾನ್ಯ ಕಾರ್ಮಿಕನಾಗಿ, ಕಾರ್ಮಿಕರ ಪರವಾಗಿ ಆಯ್ಕೆಯಾಗಿ ಬಂದಿದ್ದರು. ಈ ವಿಧಾನಸಭೆಯಲ್ಲಿ ಅವರು, ಸೂರ್ಯ ನಾರಾಯಣ ರಾವ್‌ರವರು, ಎಂ.ಎಸ್. ಕೃಷ್ಣರವರು ಮೈಕಲ್ ಫರ್ನಾಂಡೀಸ್‌ರವರು, ಸಿ.ಎಂ. ಆರ್ಮುಗಂರವರು ನಾನು ವಿಶೇಷವಾಗಿ ನೋಡಿರತಕ್ಕದ್ದು ಈ ನಾಲ್ಕು ಜನರನ್ನು ನೋಡಿದ್ದೇವೆ. ಪಂಪಾಪತಿಯವರು ದುಡಿಯುವವರ ವರ್ಗದ ಪರವಾಗಿ ಮಾಡುತ್ತಿದಂಥ ಹೋರಾಟ ಬಹಳ ದೊಡ್ಡದು ಎಂದು ನಾನು ತಿಳಿದುಕೊಂಡಿದ್ದೇನೆ. ಅವರಲ್ಲಿ ನಾನು ನೋಡಿದ ವಿಶೇಷವಾದ ಗುಣ ಎಂದರೆ ಅವರು ಹೋರಾಟವನ್ನು ಮಾಡತಕ್ಕಂಥ ಸಂದರ್ಭದಲ್ಲಿ ವೈಚಾರಿಕ ಸಂಘರ್ಷಕ್ಕೆ ಅವರು ಆಧ್ಯತೆಯನ್ನು ಕೊಡುತ್ತಾ ಇದ್ದರು. ಅವರು ವೈಯಕ್ತಿಕ ಸಂಘರ್ಷಕ್ಕೆ ಆಧ್ಯತೆಯನ್ನು ಕೊಡುತ್ತಾ ಇರಲಿಲ್ಲ. ಇವೊತ್ತು ವಿಶೇಷವಾಗಿ ಈ ಒಂದು ಖಾಸಗೀಕರಣ ಮತ್ತು ಇಡೀ ಪ್ರಪಂಚದಲ್ಲೇ ಆರ್ಥಿಕ ಕ್ಷೇತ್ರದಲ್ಲಿ ಆಗುತ್ತಿರತಕ್ಕಂಥ ಬದಲಾವಣೆಯ ಸಂದರ್ಭದಲ್ಲಿ ಕಾರ್ಮಿಕರ ಪಾತ್ರದ ಬಗ್ಗೆ ಚಿಂತನೆ ಮಾಡತಕ್ಕಂಥ ಅವಶ್ಯಕತೆ ಬಹಳ ಇದೆ. ಇಂಥ ಸನ್ನಿವೇಶದಲ್ಲಿ ನಮ್ಮ ರಾಜ್ಯದಲ್ಲಿ ಪಂಪಾಪತಿಯವರ ನಿಧನ ಕಾರ್ಮಿಕ ನಾಯಕತ್ವಕ್ಕೆ ಮುಖಂಡತ್ವದ ಕೊರತೆಯು ಎದ್ದು ಕಾಣುತ್ತದೆ ಎಂದು ಹೇಳಬಯಸುತ್ತೇನೆ. ಅವರ ಜೀವನವು ನಿಜವಾಗಿಯೂ ಅನುಕರಣೀಯವಾಗಿದ್ದಂಥ ಜೀವನ. ಕೊನೆಯ ಉಸಿರಿರುವ ತನಕವೂ ಕೂಡ ಅವರು ಪ್ರಾಮಾಣಿಕವಾಗಿ ದುಡಿದವರು. ಅವರು ದಾವಣಗೆರೆಯಷ್ಟೇ ಅಲ್ಲ, ಇಡೀ ರಾಜ್ಯದ ಕಾರ್ಮಿಕರ ಹಿತದೃಷ್ಟಿಯಿಂದ ದುಡಿದಂಥ ವ್ಯಕ್ತಿ. ಅವರನ್ನು ನಾವು ಇವೊತ್ತು ಕಳೆದುಕೊಂಡಿದ್ದೇವೆ ಮಾನ್ಯ ಎಸ್. ಪುಟ್ಟಸ್ವಾಮಿ ಮತ್ತು ಪಂಪಾಪತಿಯವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೋರಿ ನಮ್ಮ ಪಕ್ಷದ ಪರವಾಗಿ ಅವರೀರ್ವರಿಗೂ ಕೂಡ ನಮ್ಮ ನಮನಗಳನ್ನು ಸಲ್ಲಿಸಿ, ಅವರ ಕುಟುಂಬಗಳಿಗೆ ಈ ಒಂದು ದುಃಖದ ಸಂದರ್ಭದಲ್ಲಿ ನಾವು ಸಾಂತ್ವನವನ್ನು ಹೇಳಬಯಸುತ್ತೇವೆ. ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

+ ಶ್ರೀ ಜಿ. ರಾಜೂಗೌಡ (ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ ನಿನ್ನೆ ಬೆಳಿಗ್ಗೆ ಸುಮಾರು ಎಂಟು ಗಂಟೆಯ ಸಮಯದಲ್ಲಿ ಆಸ್ಪತ್ರೆಯಲ್ಲಿದ್ದಂಥ ಮಾನ್ಯ ಮಾಜಿ ಶಾಸಕರು, ಹಿರಿಯರೂ ಆಗಿರತಕ್ಕಂಥ ಶ್ರೀಮಾನ್ ಪುಟ್ಟಸ್ವಾಮಿಯವರ ನಿಧನ ಸುದ್ದಿಯನ್ನು ಕೇಳಿ ನನಗೆ ಬಹಳ ದಿಗ್ಭ್ರಮೆಯಾಯಿತು. ಅತೀವ ದುಃಖವನ್ನು ಕೂಡ ನಾನು ಅನುಭವಿಸಿದ್ದೇನೆ. ಏಕೆಂದರೆ ಅವರು ಬಹಳ ಸರಳಜೀವಿ. ಹಿತ ಮತ್ತು ಮಿತ ಭಾಷಿ. ಅವರು ಚಾಮರಾಜನಗರ ತಾಲ್ಲೂಕಿನಲ್ಲಿ 1927ರಲ್ಲಿ ಪುಟ್ಟಕಾಮೆ ಎನ್ನುವಂಥ ಹಳ್ಳಿಯಲ್ಲಿ ಕೃಷಿಕ ಕುಟುಂಬದಲ್ಲಿ ಜನಿಸಿದರು. ಬಹಳ ಕಷ್ಟಕಾರ್ಪಣ್ಯಗಳಲ್ಲಿ ಬೆಳೆದವರು. ಅದಾಗ್ಯೂ ಕೂಡ ಅವರ ವಿದ್ಯಾಭ್ಯಾಸವನ್ನು ಬಹಳ

ಕಷ್ಟದಲ್ಲಿಯೇ ಮಾಡಿದ್ದಾರೆ. ಅವರು ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮತ್ತು ಕಾನೂನು ಪದವಿಯನ್ನು ಪಡೆದಿದ್ದರು. ಅವರು ವಕೀಲವೃತ್ತಿಯನ್ನು ಸ್ವಲ್ಪಕಾಲ ಮಾಡಿದ್ದರು. ಹೆಚ್ಚುಕಾಲ ಅದನ್ನು ಮುಂದುವರಿಸಲಿಲ್ಲ. ಕಾರಣ ಅವರಲ್ಲಿದ್ದಂಥ ಸ್ವಾಭಿಮಾನ, ಸರಳತೆ, ನೇರನುಡಿ ಮತ್ತು ನಡತೆ ಹಾಗೂ ಗುಣಗಳು ಜನಗಳನ್ನು ಆಕರ್ಷಣೆ ಮಾಡತಕ್ಕಂಥವುಗಳಾಗಿದ್ದವು. ಆ ತಾಲ್ಲೂಕಿನ ಜನರು ಇವರನ್ನು ರಾಜಕೀಯ ಕ್ಷೇತ್ರಕ್ಕೆ ತರಬೇಕೆಂಬ ಮಹದಾಶೆಯನ್ನು ಇಟ್ಟುಕೊಂಡು ಇವರನ್ನು ರಾಜಕೀಯಕ್ಕೆ ಕಳುಹಿಸಿದರು. ಮೊಟ್ಟಮೊದಲು ಅವರು ಚಾಮರಾಜನಗರ ತಾಲ್ಲೂಕು ಬೋರ್ಡ್‌ನ ಅಧ್ಯಕ್ಷರಾಗಿ ಸುಮಾರು ಮೂರು ವರ್ಷಗಳ ಕಾಲ ಸತತವಾಗಿ ಮಹತ್ವಪೂರ್ಣವಾದ ಸೇವೆಯನ್ನು ಸಲ್ಲಿಸಿ ಜನರ ಪ್ರೀತಿಗೆ ಪಾತ್ರರಾಗಿದ್ದರು. ಅದರ ಜೊತೆಗೆ ಅನೇಕ ಸೇವಾ ಸಹಕಾರ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಕಳೆದ 1967 ರಲ್ಲಿ ಸ್ವತಂತ್ರವಾಗಿ ಗೆದ್ದು ಈ ಸದನವನ್ನು ಪ್ರವೇಶ ಮಾಡಿದ್ದಾರೆ. ಹಾಗೆಯೇ 1972,83.87 ರಲ್ಲಿ ಒಟ್ಟು ನಾಲ್ಕು ಸಾರಿ ಚಾಮರಾಜನಗರವನ್ನು ಪ್ರತಿನಿಧಿಸಿ ವಿಧಾನಸಭೆಯಲ್ಲಿ ಮತ್ತು ಹೊರಗೆ ಸಾಮಾಜಿಕ ಹೋರಾಟಕ್ಕೆ ಬಹಳ ಶ್ರಮಿಸಿದ್ದಾರೆ. ಜನಮನ್ನಣೆಯನ್ನು ಅತ್ಯಂತ ಹೆಚ್ಚಾಗಿ ಅವರು ಪಡೆದುಕೊಂಡಿದ್ದರು. ತದನಂತರ ಕೊನೆಯಲ್ಲಿ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾಗಿ ಒಂದು ವರ್ಷ ಕಾಲ ಒಳ್ಳೆಯ ಸೇವೆ ಸಲ್ಲಿಸಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಬೇಕಾದರೆ ಅವರ ಧೋರಣೆ ಏನಿತ್ತು, ಅವರ ನಿಲುವು ಏನಿತ್ತು, ಅವರ ಆದರ್ಶಗಳು ಏನಿದ್ದುವು ಅವುಗಳನ್ನು ನಾವು ಅನುಸರಿಸಬೇಕಾಗುತ್ತದೆ. ಹಾಗೆ ಮಾಡಿದರೆ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ. ಅವರ ಅಗಲುವಿಕೆಯಿಂದ ಉಂಟಾದ ನಷ್ಟವನ್ನು ಭರಿಸಲು ದೇವರು ಅವರ ಕುಟುಂಬದವರಿಗೆ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ. ಗುರುಸ್ವಾಮಿ(ಚಾಮರಾಜನಗರ) : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಇಬ್ಬರು ಹಿರಿಯ ಮಾಜಿ ಶಾಸಕರುಗಳಾದ ಸನ್ಮಾನ್ಯ ಪುಟ್ಟಸ್ವಾಮಿಯವರ ಮತ್ತು ಪಂಪಾಪತಿಯವರ ನಿಧನದ ಸುದ್ದಿಯನ್ನು ತಿಳಿದು ತಾವು ನಿರ್ಣಯದ ಮೂಲಕ ಸದನದಲ್ಲಿ ಮಂಡಿಸಿದ್ದೀರಿ, ಅದಕ್ಕೆ ನಮ್ಮ ಪಕ್ಷದ ವತಿಯಿಂದ ನಮ್ಮ ಬೆಂಬಲವನ್ನು ವ್ಯಕ್ತ ಮಾಡುತ್ತಾ, ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಮತ್ತಿತರು ಮಾತನಾಡಿ ಸಂತಾಪವನ್ನು ವ್ಯಕ್ತ ಮಾಡಿದ್ದಾರೆ. ಪುಟ್ಟಸ್ವಾಮಿಯವರ ಬಗ್ಗೆ ಹೇಳಬೇಕೆಂದರೆ ಅವರಲ್ಲಿ ಬಹಳ ಶಿಸ್ತು ಪ್ರಾಮಾಣಿಕತೆ, ದಕ್ಷತೆ, ಮತ್ತು ಕಮಿಟ್‌ಮೆಂಟ್‌ನ್ನು ನಾವು ಅವರಲ್ಲಿ ಹೆಚ್ಚಾಗಿ ಕಾಣುತ್ತಿದ್ದೆವು. ಬಹುಶಃ ನಿನ್ನೆಯ ದಿವಸ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮತ್ತಿತರ ಇಬ್ಬರು ಕರ್ನಾಟಕ ರಾಜ್ಯ ಸಚಿವರುಗಳು ಮತ್ತು ಜಿಲ್ಲಾ ಶಾಸಕರುಗಳು ನಾವು ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದೆವು. ಅಲ್ಲಿ ಸೇರಿದ್ದಂಥ ಜನಸಾಗರವನ್ನು ನೋಡಿದಾಗ ಅವರ ವ್ಯಕ್ತಿತ್ವ ಎಷ್ಟು ಬೆಳೆದಿತ್ತು ಎಂಬುದಕ್ಕೆ ಅದೇ ಸಾಕ್ಷಿ ಎಂಬುದು ನಮಗೆ ಅರ್ಥವಾಗುತ್ತದೆ. ಜನಸಾಗರವೇ ಅವರ ಜನಮನ್ನಣೆಗೆ ಸಾಕ್ಷಿ ಆಗಿತ್ತು. ಕಳೆದ ವಿಧಾನ ಸಭಾ ಚುನಾವಣೆಗಳಲ್ಲಿ ಚಾಮರಾಜನಗರ ಕ್ಷೇತ್ರದಿಂದ ನಾಲ್ಕು ಸಾರಿ ಸದನವನ್ನು ಪ್ರತಿನಿಧಿಸಿದ್ದಾರೆ. ನಾವು ಗಮಿಸಬೇಕಾದ ವಿಚಾರ ಏನೆಂದರೆ, ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದರು, ಪ್ರಾರಂಭದಿಂದಲೂ ಕೂಡ ಕೊನೆಯವರೆಗೂ ಅದೇ ಪಕ್ಷದಲ್ಲಿ ಉಳಿದುಕೊಂಡು ಸೇವೆ ಸಲ್ಲಿಸಿಕೊಂಡು ಬಂದಿರುವುದು ಬಹಳ ವಿಶೇಷವಾದ ಸಂಗತಿ. ಅವರಿಗೆ ಎಷ್ಟೇ ಆಶೆ-ಆಮಿಷಗಳು

ಬಂದರೂ ಕೂಡ ಕಾಂಗ್ರೆಸ್ ಪಕ್ಷವನ್ನು ತ್ಯಜಿಸದೆ ಪಕ್ಷಕ್ಕಾಗಿ, ಪಕ್ಷದ ಸಂಘಟನೆಗಾಗಿ ಮತ್ತು ಶಾಸಕರಾಗಿ ಹಲವಾರು ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಿ ಭಾಗಿಯಾಗಿರತಕ್ಕಂಥಾದ್ದು ಬಹಳ ಸಂತೋಷಕರ ವಿಚಾರವಾಗಿದ್ದು ಅವರ ವ್ಯಕ್ತಿತ್ವಕ್ಕೆ ಹಿಡಿದಂಥ ಸಾಕ್ಷಿಯೂ ಆಗಿದೆ. ಅವರು ಸಹಕಾರಿ ಕ್ಷೇತ್ರದಲ್ಲಿ ಕೂಡ ಸೇವೆಯನ್ನು ಸಲ್ಲಿಸಿದ್ದಾರೆ. ಎಪಿಎಂಸಿ, ಟಿಎಪಿಸಿಎಂಎಸ್, ಮುಂತಾಗಿ ಹಲವಾರು ಸಂಘ ಸಂಸ್ಥೆಗಳಲ್ಲಿ ಅವರು ಕೆಲಸ ಮಾಡಿದ್ದಾರೆ. ಜಿಲ್ಲಾಬೋರ್ಡ್‌ನಲ್ಲಿಯೂ ಅಧ್ಯಕ್ಷರಾಗಿ ಕೆಲಸ ಮಾಡಿ ಸಾಕಷ್ಟು ಅಭಿವೃದ್ಧಿ ಕೆಲಸಕಾರ್ಯಗಳನ್ನು ಚಾಮರಾಜನಗರ ಕ್ಷೇತ್ರದಲ್ಲಿ ಮಾಡಿರುವುದನ್ನು ನಾವು ಕಾಣುತ್ತೇವೆ. ಅವರ ಮಾರ್ಗದರ್ಶನ ಅವರು ನಡೆದುಕೊಂಡು ಬಂದಂಥ ರೀತಿ, ಸಮಾಜಕ್ಕೆ ಅವರ ಕಮಿಟ್‌ಮೆಂಟ್ ಮುಂತಾದವುಗಳೆಲ್ಲವೂ ಕೂಡ ಇತ್ತೀಚಿನ ನಮ್ಮ ಶಾಸಕರುಗಳಿಗೆ, ನಮ್ಮ ಪೀಳಿಗೆಗೆ ಮಾರ್ಗದರ್ಶನವಾಗಿದೆ ಎಂಬ ಮಾತನ್ನು ಹೇಳುತ್ತಾ ಸನ್ಮಾನ್ಯ ಪಂಪಾಪತಿಯವರು ಕೂಡ ಮಾಜಿ ಶಾಸಕರು. ಅವರ ಸೇವೆಯೂ ಕೂಡ ಅಪಾರವಾಗಿತ್ತು. ಪತ್ರಿಕೆಗಳ ಮೂಲಕ ಅವರ ಸೇವಾಕಾರ್ಯಗಳನ್ನು ಓದಿ ತಿಳಿದುಕೊಂಡಿದ್ದೇನೆ. ಈ ಇಬ್ಬರೂ ಕೂಡ ನಮ್ಮ ಮುಂದಿಲ್ಲ. ಆದರೆ ಅವರು ನೀಡಿದ ಮಾರ್ಗದರ್ಶನ, ಸನ್ನಡತೆಗಳು ನಮಗೆ ಅನುಕರಣೀಯವಾಗಿರಲಿ ಎಂದು ಹೇಳುತ್ತಾ ಅವರುಗಳ ಕುಟುಂಬವರ್ಗದವರಿಗೆ ಆಗಿರತಕ್ಕಂಥ ನಷ್ಟ ಹಾಗೂ ಕ್ಷೇತ್ರದಲ್ಲಿ ಜನರಿಗೆ ಉಂಟಾಗಿರತಕ್ಕಂಥ ನಷ್ಟವನ್ನು ದುಃಖವನ್ನು ಭರಿಸಲು ದೇವರು ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡುತ್ತಾ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೇ, ಮೊನ್ನೆ ತಾನೆ ನಿಧನರಾಗಿರತಕ್ಕಂಥ ಮಾಜಿ ಸದಸ್ಯ ಪುಟ್ಟಸ್ವಾಮಿಯವರು ನಮ್ಮ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ತನ್ನದೇ ಆದಂಥ ವರ್ಚಸ್ಸು ಮತ್ತು ನಡವಳಿಕೆಗೆ ಹೆಸರಾದಂಥವರು ಆಗಿದ್ದರು. ಸಜ್ಜನಿಕೆಯ ಸ್ವಭಾವ ಮತ್ತು ಸರಳತೆಯ ನಡತೆಯು ಇವೊತ್ತಿನ ಜನಾಂಗಕ್ಕೆ ದಾರಿದೀಪವಾಗಿದೆ.

11.30 ಪಿ.ಎಂ.

ಅವರು 1962ರಲ್ಲಿ ಪ್ರಥಮ ಬಾರಿಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಸದಸ್ಯರಾಗಿ ಆಯ್ಕೆಯಾಗಿ ತದನಂತರ 5 ವರ್ಷ ಕಾಲ ಆ ಮಂಡಲಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಪಕ್ಷೇತರ ಶಾಸಕರಾಗಿ ತದನಂತರ ಕಾಂಗ್ರೆಸಿನ ಶಾಸಕರಾಗಿ 72, 83, 83.85 ರ ಚುನಾವಣೆಯಲ್ಲೂ ಆಯ್ಕೆಯಾಗಿ 4 ಬಾರಿ ವಿಧಾನಸಭೆಗೆ ಬಂದರು. ಅವರ ಶಿಸ್ತುಬದ್ಧ ಜೀವನ ಅವರ ಶುಭ್ರ ಬಿಳಿವಸ್ತ್ರದಲ್ಲಿ ಕಾಣುತ್ತಿತ್ತು. ಮತ್ತು ಯಾರೇ ಸಾಮಾನ್ಯ ವರ್ಗದವನಾಗಲೀ ಕಡುಬಡವನಾಗಲೀ ಸಿಕ್ಕಿದಾಗಲೂ ಅವರ ಜೊತೆ ಇವರು ಮಾತನಾಡುತ್ತಿದ್ದ ರೀತಿ ಇದನ್ನೆಲ್ಲಾ ಅವರು ಬಹಳ ಸರಳತೆಯಿಂದ ನಡೆದುಕೊಂಡು ಬಂದಿದ್ದರು. ಅದಕ್ಕೊಂದು ಉದಾಹರಣೆ ಹೇಳಬೇಕು ಅಂದರೆ ನಾಲ್ಕು ಬಾರಿ ಶಾಸಕರಾಗಿದ್ದರೂ ಅವರಿಗೆ ಚಾಮರಾಜನಗರದಲ್ಲಾಗಲೀ ಮೈಸೂರು ನಗರದಲ್ಲಾಗಲೀ ಅವರಿಗಾಗಿ ಒಂದು ಸ್ವಂತ ಮನೆ ಕೂಡ ಮಾಡಿರಲಿಲ್ಲ. ಕೊನೇಪಕ್ಷ ಓಡಾಡುವುದಕ್ಕೆಂದು ಸ್ವಂತ ಕಾರು ಅವರದಿರಲಿಲ್ಲ. ಅವರು ಯಾವ ರೀತಿ ಸರಳ ಜೀವನ ನಡೆಸುತ್ತಿದ್ದರು ಎನ್ನುವುದಕ್ಕೆ ಇದೊಂದು ನಿದರ್ಶನ ಅದೇ ರೀತಿ ಕಳೆದ ಬಾರಿ ಅವರು ಕಾಂಗ್ರೆಸಿನಿಂದ ಟಿಕೆಟ್‌ವಂಚಿತರಾದ ಮೇಲೆ ಅವರಿಗೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಪದವಿ ನೀಡಿತ್ತು. ಅವರ ಹಿರಿತನ ಮತ್ತು

ಪಕ್ಷಕ್ಕೆ ಅವರು ಸಲ್ಲಿಸಿದ್ದ ಸೇವೆಗೆ ಹೋಲಿಸಿದರೆ ಅಂಥಾ ದೊಡ್ಡ ಅಧಿಕಾರವೇನಲ್ಲ. ಆದರೂ ಅವರು ಅನಾರೋಗ್ಯದಿಂದ ಬಳಲುತ್ತಿದ್ದ ಸಂದರ್ಭದಲ್ಲಿ ಏಕಾಯೇಕಿ ಐದಾರು ತಿಂಗಳ ಹಿಂದೆ ಆ ಪದವಿಯನ್ನು ಅವರಿಂದ ಕಸಿದುಕೊಂಡರು. ಹಾಗಾಗಿ ಅವರು ಆ ಜಿಲ್ಲೆಯ ಪಕ್ಷದ ಇತ್ತೀಚಿನ ರಾಜಕೀಯ ಬೆಳವಣಿಗೆ ಮತ್ತು ಈ ಸ್ಥಾನದಿಂದ ವಂಚಿತರಾದದ್ದು ಅವರಿಗೆ ಬಹಳ ಮಾನಸಿಕ ನೋವುಂಟು ಮಾಡಿತ್ತು ಆದರೂ ಅವರ ಸರಳತೆಯನ್ನು ನೋಡಿದಾಗ ಅದು ಇವತ್ತಿನ ಜನತೆಗೆ ಮಾರ್ಗದರ್ಶಕವಾಗಿದೆ. ಆ ಕಾರಣದಿಂದ ಸರ್ಕಾರ ಅವರ ಕುಟುಂಬಕ್ಕೆ ಮೈಸೂರುನಗರದಲ್ಲಿ ಒಂದು ನಿವೇಶನವನ್ನು ಕೊಡಬೇಕು. ಮತ್ತೆ ಮೂರು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾದವರಿಗೆ ಅವರು ಸಾಕಷ್ಟು ಸೇವೆಯನ್ನು ಸಲ್ಲಿಸಿರುತ್ತಾರೆ. ಅಂಥವರು ನಿಧನರಾದಾಗ ಕನಿಷ್ಟ ತಹಸೀಲ್ದಾರ್ ಮಟ್ಟದಲ್ಲಾದರೂ ಸರ್ಕಾರದ ಗೌರವ ಕೊಡುವಂತಹ ವ್ಯವಸ್ಥೆ...

ಅಧ್ಯಕ್ಷರು : ಅದು ಇದೆ. ಪ್ರತಿಯೊಂದು ಕಡೆಯೂ ತಹಶೀಲ್ದಾರ್ ಹೋಗಿ ಗೌರವ ಸಲ್ಲಿಸುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಅಂತಹ ಸನ್ನಿವೇಶವೇನೂ ನಮಗೆ ಕಾಣಿಸಲಿಲ್ಲ. ನಾನೂ ಜಿಲ್ಲಾಮಂತ್ರಿಗಳಿಗೂ ಅದು ಕಂಡಂತೆ ಆಗಲಿಲ್ಲ. ಆದರೂ ಇಂಥ ಗಣ್ಯವ್ಯಕ್ತಿಗಳನ್ನು ಅವರು ಮಂತ್ರಿಗಳಾಗಲಿಲ್ಲ ಎಂಬ ಒಂದೇ ಕಾರಣಕ್ಕಾಗಿ ಅವರನ್ನು ಕಡೆಗಣಿಸುವುದು ಬೇಡ. ಅವರು ಮಾಜಿ ಶಾಸಕರಾಗಿದ್ದರೂ ಅವರ ಸೇವೆ ಹಿರಿತನಕ್ಕೆ ಅನುಗುಣವಾಗಿ ಸರ್ಕಾರದ ಪರವಾಗಿ ಗೌರವ ಸೂಚಿಸಿರುವಂತಹ ಒಂದು ವ್ಯವಸ್ಥೆ ನಿರ್ಮಾಣವಾಗಬೇಕು. ಅವರ ಕುಟುಂಬಕ್ಕೆ ಅವರು ನಿಧನವನ್ನು ಸೈರಣೆ ಮಾಡುವಂತಹ ಶಕ್ತಿ ಬರಲಿ ಎಂದು ಆಶಿಸಿ ಅವರಿಗೊಂದು ನಿವೇಶನ ನೀಡಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಅಧ್ಯಕ್ಷರೇ, ಇವತ್ತು ಈ ಸದಸ್ಯರಾಗಿ ಉತ್ತಮವಾಗಿ ಕೆಲಸ ಮಾಡಿದ್ದಂತಹ ಸನ್ಮಾನ್ಯ ಪುಟ್ಟಸ್ವಾಮಿ ಹಾಗೂ ಪಂಪಾಪತಿಯವರು ನಮ್ಮನ್ನಗಲಿ ಈ ರಾಜಕೀಯಕ್ಕೆ ಮತ್ತು ರಾಜ್ಯಕ್ಕೆ ತುಂಬಲಾರದಷ್ಟು ನಷ್ಟವಾಗಿದೆ. ಸನ್ಮಾನ್ಯ ಪುಟ್ಟಸ್ವಾಮಿಯವರು ತಾಲ್ಲೂಕು ಪಂಚಾಯ್ತಿ ಜಿಲ್ಲಾ ಪಂಚಾಯ್ತಿಯವರಿಗೆ ತುಂಬಾ ಕೆಳಗಿನ ಹಂತದಿಂದ ಕೆಲಸ ಮಾಡಿರುವುದರ ಜೊತೆಯಲ್ಲಿ ಈ ವಿಧಾನಸಭೆಗೆ 4 ಬಾರಿ ಗೆದ್ದು ಈ ರಾಜ್ಯದ ಅನೇಕ ಉಪಯುಕ್ತ ಕೆಲಸಗಳಲ್ಲಿ ಅವರೂ ಭಾಗಿಯಾಗಿ ಇವತ್ತು ನಮ್ಮನ್ನಗಲಿದ್ದಾರೆ. ಅವರು ಬಿಟ್ಟುಹೋಗಿರುವ ಎಲ್ಲಾ ಒಳ್ಳೆಯ ನಿದರ್ಶನಗಳನ್ನು ಮುಂದಿನ ಪೀಳಿಗೆ ಅನುಸರಿಸಲಿ ಎಂದು ಈ ಸಂದರ್ಭದಲ್ಲಿ ತಿಳಿಸುತ್ತಾ ಹಾಗೆಯೇ ಅವರ ಕುಟುಂಬದವರಿಗೆ ಈ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಹಾಗೆಯೇ ಶ್ರೀಯುತ ಪಂಪಾಪತಿಯವರು ತಮಿಳುನಾಡಿನಿಂದ ದಾವಣಗೆರೆಗೆ ಕಾರ್ಮಿಕರಾಗಿ ಬಂದು ಅಲ್ಲಿನ ಕಾಟನ್ ಮಿಲ್‌ನಲ್ಲಿ ಕೆಲಸಕ್ಕೆ ಸೇರಿಕೊಂಡು ಒಬ್ಬ ವ್ಯಕ್ತಿ ಅತ್ಯಂತ ಕಡಿಮೆ ಶಿಕ್ಷಣ ಕೇವಲ 4ನೇ ತರಗತಿಯವರೆಗೆ ಓದಿದ್ದ ಪಂಪಾಪತಿಯವರು ಅತ್ಯಂತ ಕಡುಬಡತನದಿಂದ ಬಂದಂಥವರು, ಇವತ್ತು ಇಡೀ ದಾವಣಗೆರೆ ನಗರದಲ್ಲಿ ಎಲ್ಲಾ ಕಾರ್ಮಿಕರನ್ನೂ ಸಂಘಟಿಸಿ ಇಡೀ ರಾಜ್ಯದಲ್ಲಿ ಒಬ್ಬ ಕಾರ್ಮಿಕ ನಾಯಕರಾಗಿ ಪ್ರತಿಬಿಂಬಿಸಿರುವ ಜೊತೆಯಲ್ಲಿ ಇವತ್ತು ದಾರಣಗೆರೆ ನಗರದಲ್ಲಿ 1976 ರಿಂದ 78 ರವರೆಗೆ ಅಲ್ಲಿನ ನಗರಸಭೆಯ ಅಧ್ಯಕ್ಷರೂ ಆಗಿದ್ದರು. ಆದಂತಹ ಸಂದರ್ಭದಲ್ಲಿ ಈ ಪರಿಸರದ ಬಗ್ಗೆ ಅವರಿಗೆ ಅಪಾರವಾದ ನಂಬಿಕೆ ಇತ್ತು. ದಾವಣಗೆರೆಯನ್ನು ಹಸಿರುಕರಣ

ಮಾಡುವುದರಲ್ಲಿ ಕಾರಣಕರ್ತರಾಗಿ ಇವತ್ತು ಎಲ್ಲಿ ನೋಡಿದರೂ ಮರಗಿಡಗಳನ್ನು ನೆಡಿಸಿದಂತಹ ಹೆಸರೇನಾದರೂ ಉಳಿದಿದ್ದರೆ ಮಾನ್ ಪಂಪಾಪತಿಯವರು ಅಂದಿನ ದಿವಸದಲ್ಲಿ ಮಾಡಿದ್ದ ಕೆಲಸ. ಇದಲ್ಲದೆ ಅವರು ಸತತವಾಗಿ 1978,83 ಮತ್ತು 85ರ ಅವಧಿಯಲ್ಲಿ 6,7 ಮತ್ತು 8ರ ವಿಧಾನಸಭೆಗೆ ಸದಸ್ಯರಾಗಿ ಒಬ್ಬ ಕಾರ್ಮಿಕನಾಯಕರಾಗಿ ಗೆದ್ದುಬಂದಿದ್ದು ಅವರ ಜನಪ್ರಿಯತೆಯನ್ನು ತೋರಿಸುತ್ತದೆ. ಹಾಗೂ ಅವರು ಅತ್ಯಂತ ಸಾಧಾರಣ ವ್ಯಕ್ತಿಗಳನ್ನೂ ತುಂಬಾ ಹತ್ತಿರಕ್ಕೆ ಕರೆದು ಮಾತನಾಡಿಸುತ್ತಿದ್ದ ಬಹು ದೊಡ್ಡ ಗುಣವನ್ನು ಹೊಂದಿದ್ದಂತಹ ವ್ಯಕ್ತಿ ಹಾಗೇ ಕಟ್ಟಕಡೆಯ ದರಿದ್ರನ ಬಗ್ಗೆ ಹೋರಾಟ ಮಾಡಿ ಅವರಿಗೆ ಬೇಕಾದ ಸವಲತ್ತು ಕೊಡಿಸುವುದರಲ್ಲಿ ಯಶಸ್ಸನ್ನು ಕಂಡು, ಇದರ ಜೊತೆಯಲ್ಲಿ ಶಾಸಕರಾಗಿ ಇಲ್ಲಿ ಕಾರ್ಮಿಕರ ಪರವಾಗಿ ಮಾಡುವಂತಹ ಶಕ್ತಿ ಪಡೆದಿದ್ದರೆ ಅದು ಪಂಪಾಪತಿಯವರಿಗೇ ಸಲ್ಲತಕ್ಕಂಥಾದ್ದು ಎಂದರೆ ಅತಿಶಯೋಕ್ತಿಯಾಗಲಾರದು. ಹಾಗಾಗಿ ಪಂಪಾಪತಿಯವರು ಅನೇಕ ಒಳ್ಳೆಯ ಕೆಲಸಗಳನ್ನು ಮಾಡುವುದರ ಜೊತೆಯಲ್ಲಿ ಅವರು ಕಾರ್ಮಿಕರಲ್ಲಿ ಒಬ್ಬ ಮಹಾನ್ ವ್ಯಕ್ತಿಯಾಗಿ ಬೆಳೆದು ಇದೇ ಕಾರ್ಮಿಕ ಜನಾಂಗಕ್ಕೆ ತನ್ನದೇ ಆದ ಕಾಣಿಕೆಯನ್ನು ಕೊಟ್ಟು ಹೋದ ಒಬ್ಬ ಮಹಾನ್ ವ್ಯಕ್ತಿ, ಅವರನ್ನು ನಾವು ಕಳೆದುಕೊಂಡಿರುವುದು ರಾಜ್ಯದ ರಾಜಕಾರಣಕ್ಕೆ ತುಂಬಾ ನಷ್ಟ ಆಗಿದೆ ಜೊತೆಯಲ್ಲಿ ಕಾರ್ಮಿಕ ವರ್ಗಕ್ಕೂ ಸೈತ ಅತ್ಯಂತ ನಷ್ಟವಾಗಿದೆ ಎಂದು ಹೇಳುವುದರಲ್ಲಿ ಯಾವುದೇ ತಪ್ಪಿಲ್ಲ. ಅವರ ಅಗಲಿಕೆ ನಮಗೆಲ್ಲ ತುಂಬ ದುಃಖ ತಂದಿದೆ ಹಾಗಾಗಿ ನಮ್ಮ ದಾವಣಗೆರೆ ಜಿಲ್ಲೆಯ ಮಂತ್ರಿಗಳಾದ ಮಲ್ಲಿಕಾರ್ಜುನ್‌ರವರು ಅರರ ಅಂತಿಮೆ ಸಂಸ್ಕಾರಕ್ಕಾಗಿ ಹೋಗಿದ್ದಾರೆ. ಅವರು ಇದ್ದಿದ್ದರೆ ಮಾತನಾಡುವವರಿದ್ದರು. ಅವರ ಕುಟುಂಬಕ್ಕೆ ಈ ದುಃಖ ತಡೆದುಕೊಳ್ಳುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಂಡು ಅವರ ಅಗಲಿಕೆ ನಮಗೆ ಅಪಾರ ನಷ್ಟವನ್ನು ತಂದಿದೆ. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ) : ಮಾನ್ಯ ಅಧ್ಯಕ್ಷರೇ ನಮ್ಮ ಇಬ್ಬರು ಮಾಜಿ ಶಾಸಕರ ನಿನ್ನೆ ನಿಧನರಾಗಿದ್ದರಿಂದ ಇವತ್ತು ಅವರ ಕುಟುಂಬಕ್ಕೆ ಮತ್ತು ಜನತೆಗೆ ಆದ ಸಂತಾಪದಲ್ಲಿ ನಾವೂ ಭಾಗಿಗಳಾಗಿ ಅವರ ಬಗ್ಗೆ ನಾಲ್ಕು ವಿಚಾರಗಳನ್ನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಪುಟ್ಟಸ್ವಾಮಿಯವರನ್ನು ಇದೇ ವಿಧಾನಸಭೆಯಲ್ಲೇ ಕಂಡದ್ದು ಆ ಮೊದಲೇ ಮೂರು ಸಲ ಅವರು ಆರಿಸಿಬಂದಿದ್ದರು ಆದರೆ ಅವರಲ್ಲಿದ್ದ ಸಜ್ಜನಿಕೆ ಸರಳತೆ ಮತ್ತು ನಯವಿನಯಗಳೇನಿದ್ದವು ಅವು ಮಾದರಿಯಾಗಿದ್ದವು. ಅವರ ಆಚರಣೆ ನಮ್ಮ ಮೇಲೆ ಪ್ರಭಾವ ಬೀರುವಂಥಾದ್ದು, ಅವರು ಮೈಸೂರು ಜಿಲ್ಲೆಯ ಚಾಮರಾಜನಗರದಿಂದ ಆರಿಸಿಬಂದು ಆ ಭಾಗದ ಬೆಳವಣಿಗೆ ದೃಷ್ಟಿಯಿಂದ ರಾಜ್ಯದ ಬೆಳವಣಿಗೆ ದೃಷ್ಟಿಯಿಂದ ಸಾಕಷ್ಟು ಚಿಂತನೆ ಮಾಡುವಂತಹ ಒಬ್ಬ ಸಜ್ಜನ ರಾಜಕಾರಣಿ ಒಬ್ಬ ಆದರ್ಶ ರಾಜಕಾರಣಿ ಎಂದು ಹೇಳಬಹುದು. ಏಕೆಂದರೆ ಅವರು ನಾಲ್ಕು ಸಲ ಆರಿಸಿ ಬಂದರೂ ಸಹಿತ ಕಾಂಗ್ರೆಸ್ ಪಕ್ಷದಲ್ಲಿದ್ದುಕೊಂಡು ಅವರು ಯಾವ ಸ್ಥಾನಮಾನಗಳಿಗೂ ಆಸೆಪಡದೆ ಈ ದೇಶದ ಜನತೆಯ ಸಲುವಾಗಿ ಮತ್ತು ತಮ್ಮ ಭಾಗದ ಸಲುವಾಗಿ ಸೇವೆ ಮಾಡುವ ಒಬ್ಬ ಸಜ್ಜನಿಕೆ ರಾಜಕಾರಣಿಯಾಗಿದ್ದರು. ಇವತ್ತು ನಮ್ಮೆಲ್ಲರಿಗೂ ಪ್ರೇರಣೆ ನೀಡುವಂಥ ಆದರ್ಶಗಳನ್ನು ಬಿಟ್ಟು ಹೋಗಿದ್ದಾರೆ. ಅವರ ಅಗಲಿಕೆಯಿಂದ ಅವರ ಕುಟುಂಬಕ್ಕೆ ಆದಂಥ ದುಃಖದಲ್ಲಿ ನಾವುಗಳೂ ಭಾಗಿಗಳಾಗಿದ್ದೇವೆ. ಅದರಂತೆ

ಪಂಪಾಪತಿಯವರೂ ಸಹಾ ಕಮ್ಯುನಿಸ್ಟ್ ನಾಯಕರಾಗಿ ದಾವಣಗೆರೆಯಿಂದ ಮಹಾನಗರಸಭೆಗೆ ಆಯ್ಕೆಯಾಗಿ ಅಧ್ಯಕ್ಷರಾಗಿ ಕೆಲಸ ಮಾಡುವುದರ ಮೂಲಕ ರಾಜಕೀಯ ಪ್ರವೇಶವನ್ನು ಮಾಡಿದಂಥ ಒಬ್ಬ ವ್ಯಕ್ತಿ. ಅವರು ದುಡಿಯುವ ಜನರ ಸಲುವಾಗಿ, ಶ್ರಮಿಕ ಜನರ ಸಲುವಾಗಿ ಈ ಒಂದು ಕಮ್ಯುನಿಸ್ಟ್ ನಾಯಕತ್ವದ ಮೂಲಕ ಅವರಿಗೆ ನ್ಯಾಯವನ್ನು ಒದಗಿಸಿಕೊಡುವ ಕಾರ್ಯವನ್ನು ಮಾಡುತ್ತಾ ಅವರು ಶಾಸಕಾಂಗಕ್ಕೂ ಸಹಿತ ಒಂದು ತಮ್ಮ ಸೇವೆಯನ್ನು ಮಾಡಿದ್ದಾರೆ. ಅವರ ಪರಿಚಯವೂ ಸಹ ನನಗೆ 1985 ರಲ್ಲಿ ಆಗಿತ್ತು. ಅವರು ಜನತೆಯ ಸಲುವಾಗಿ ಅವರಿಗೆ ಇರುವ ಕಳಕಳಿ, ಶ್ರಮಿಕ ವರ್ಗದ ಸಲುವಾಗಿ ಮತ್ತು ಅವರುಗಳಿಗೆ ಯಾವ ನ್ಯಾಯವನ್ನು ಒದಗಿಸಬೇಕಾಗಿದೆ, ಆ ದಿಸೆಯಲ್ಲಿ ಅವರು ಸಾಕಷ್ಟು ಕೆಲಸವನ್ನು ಮಾಡಿದ್ದಾರೆ. ಅದು ಬರೀ ದಾವಣಗೆರೆ ಅಷ್ಟೇ ಅಲ್ಲ. ಇಡೀ ರಾಜ್ಯದಲ್ಲಿ ಅವರು ತಮ್ಮ ಕಮ್ಯುನಿಸ್ಟ್ ಒಂದು ಪಕ್ಷದ ಮೂಲಕ ಅಥವಾ ಆ ನಾಯಕತ್ವವನ್ನು ತೆಗೆದುಕೊಳ್ಳುವುದರ ಮೂಲಕ ಆ ಜನತೆಗಾಗಿ ಸೇವೆಯನ್ನು ಮಾಡಿದ್ದಾರೆ. ಅಂಥವರು ಈ ಭಾಗದ ಬೆಳವಣಿಗೆಗೆ ತಮ್ಮದೇ ಆದಂಥ ಕೊಡುಗೆಯನ್ನು ಕೊಡುವುದರ ಜೊತೆಗೆ ಈಗಲಾದರೂ ಸಹ ಇಂಥ ಕಾಲದಲ್ಲಿ ಶ್ರಮಿಕ ವರ್ಗದ ಈ ಒಂದು ದುಡಿಯುವ ಜನತೆಯ ಸಲುವಾಗಿ ನ್ಯಾಯವನ್ನು ಒದಗಿಸಿಕೊಡುವ ನಾಯಕರನ್ನು ಕಳೆದುಕೊಂಡಿದ್ದಕ್ಕೆ ಆ ಜನತೆಗೆ ಆದಂಥ ಅಪಾರ ದುಃಖದಲ್ಲಿ ಅವರ ಕುಟುಂಬಕ್ಕೆ ಆದ ದುಃಖದಲ್ಲೂ ನಾವು ಭಾಗಿಗಳಾಗಿದ್ದೇವೆ. ಪುಟ್ಟಸ್ವಾಮಿಯವರ ಆದರ್ಶವನ್ನು ಅಥವಾ ಪಂಪಾಪತಿಯವರ ಆದರ್ಶವನ್ನು ನಾವೆಲ್ಲಾ ನಮ್ಮ ನಮ್ಮ ಕರ್ತವ್ಯಗಳಲ್ಲಿ ನೆರವೇರಿಸಬೇಕಾಗುತ್ತದೆ ಎನ್ನುವ ವಿಚಾರವನ್ನು ಹೇಳಿ ತಾವು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಯಾವಗಲ್ (ನಗರಗುಂದ) : ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಸ್ವಾಮಿಯವರು ಹಾಗೂ ಪಂಪಾಪತಿಯವರ ನಿಧನಕ್ಕೆ ಸಭಾನಾಯಕರು ಮಂಡಿಸಿರುವ ತಂತಾಪ ಸೂಚನೆಯನ್ನು ಬೆಂಬಲಿಸುತ್ತಾ ಮಾನ್ಯ ಪುಟ್ಟಸ್ವಾಮಿಯವರ ಪರಿಚಯ ಸಾಕಷ್ಟು ನನಗೆ ಇತ್ತು. ಅವರು ಮೈಸೂರು ಜಿಲ್ಲೆಗೆ ಸೇರಿದ್ದರೂ ನಾನು ದೂರದ ಧಾರವಾಡ ಜಿಲ್ಲೆಗೆ ಸೇರಿದ್ದರೂ ಮಾನ್ಯ ನಜೀರ್ ಸಾಹೇಬರವರ ಆತ್ಮೀಯ ವಲಯದಲ್ಲಿ ಪಕ್ಷ ಪಂಗಡಗಳನ್ನು ಮೀರಿ ಅವರು ಬಹಳ ವೈಯಕ್ತಿಕವಾದಂಥ ಸ್ನೇಹಿತರಾಗಿದ್ದರು. ಬಹಳ ಅತ್ಯಂತ ಸಜ್ಜನರಾದಂಥ ವ್ಯಕ್ತಿ. ಅವರು ಇತ್ತೀಚಿನ ದಿನಗಳಲ್ಲೂ ಸಿಕ್ಕಿದ್ದರು. ಅವರು ಸಾಕಷ್ಟು ಬಳಲಿದ್ದರು. ಅವರ ಬಹುತೇಕ ಸಾರ್ವಜನಿಕ ಬದುಕು ಹಸಿರಾಗಿತ್ತು ಎಂದು ಹೇಳಿ ತಿಳಿದುಕೊಂಡಿದ್ದೇವೆ. ಅವರ ನಿಧನದಿಂದ ಅವರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸುವಂಥ ಶಕ್ತಿಯನ್ನು ಕೊಡಲಿ ಎಂದು ಹೇಳುತ್ತಾ ಪಂಪಾಪತಿಯವರು ನಮ್ಮ ಜೊತೆ ಇದ್ದರು ಪುಟ್ಟಸ್ವಾಮಿಯವರು ಇದ್ದ ಹಾಗೆ. ಬಹುತೇಕ ಇತ್ತೀಚಿನ ವರ್ಷಗಳಲ್ಲಿ ಕಾರ್ಮಿಕ ವರ್ಗದಿಂದ ಸದನದಲ್ಲಿ ಪ್ರಾತಿನಿಧ್ಯ ಇಲ್ಲದಂಥ ಒಂದು ಪರಿಸ್ಥಿತಿ ಉಂಟಾಗಿದೆ. ಸಮಾಜದ ಎಲ್ಲಾ ವರ್ಗಗಳಿಂದ ಪ್ರಾತಿನಿಧ್ಯ ಇರಬೇಕೆನ್ನುವ ಒಂದು ತತ್ವ ಏನಿದೆ, ಬಹುತೇಕ ಅದು ಆಗುತ್ತಿಲ್ಲ ಎನ್ನುವ ಭಾವನೆಯು ಇರುವಾಗ ಅವರು ನಿಧನರಾಗುತ್ತಿದ್ದಾರೆ. ಸೂರ್ಯನಾರಾಯಣರಾವ್‌ರವರು ಕಾರ್ಮಿಕ ವರ್ಗದ ಒಬ್ಬ ದೊಡ್ಡ ಮುಖಂಡರು. ನಾನು ಪಂಪಾಪತಿಯವರನ್ನು ನೆನೆಸಿಕೊಳ್ಳುತ್ತೇನೆ, ನಾವೆಲ್ಲಾ ಮೊದಲಿಗೆ ಹೊಸದಾಗಿ ಬಂದಿದ್ದವರು. ಕೆಲಕಾಲ ಶಾಸಕರಾಗಿದ್ದೆವು. ಮಂತ್ರಿಗಳಾಗಿದ್ದೆವು. ಅದು ಎಂ.ಎಸ್.

ಕೃಷ್ಣನ್‌ರವರಾಗಿರಬಹುದು, ವಿಶೇಷವಾಗಿ ಪಂಪಾಪತಿಯವರು ಅವರು ಏನೋ ಒಂದು ರೀತಿ ಅವರ ಭಾಷಣದಲ್ಲಿ ಒಂದು ರೀತಿಯ ಗ್ರಾಮ್ಯಭಾಷೆಯಾಗಿತ್ತೋ ಅಥವಾ ಬಹುತೇಕ ನೆಲದಿಂದ ಉದ್ಭವವಾಗಿ ಬರುತ್ತಿತ್ತೋ ಎನ್ನುವಂಥ ಭಾಷೆಯಲ್ಲಿ ಅವರ ಹಿನ್ನೆಲೆ ಬಹಳ ಚಿಕ್ಕದಾಗಿದ್ದರೂ ಬಹಳ ನಮ್ರವಾಗಿದ್ದರೂ ಅವರು ಮಾತನಾಡುವಂಥ ವಿಚಾರಗಳು ಬಹಳ ಮೇಲ್ಪಟ್ಟದ್ದಾಗಿತ್ತು. ಅಷ್ಟೇ ಅಲ್ಲ, ಬಹುತೇಕ ಯಾವುದೇ ವಿಷಯ ಬಂದರೂ ಅದು ಬಜೆಟ್ ಭಾಷಣವಿರಬಹುದು ಅಥವಾ ಬೇರೆ ವಿಚಾರಗಳು ಇರಬಹುದು, ಕಾರ್ಮಿಕ ವರ್ಗದ ವಿಚಾರ ಬಂದರೆ ಅಥವಾ ಅದೂ ವಿಶೇಷವಾಗಿ ಕೃಷಿ ಕಾರ್ಮಿಕರ ಅಸಂಘಟಿತವಾದಂಥ ಕೃಷಿ ಕಾರ್ಮಿಕರ ವಿಚಾರಗಳು ಬಂದರೆ ಯಾರನ್ನು ನಾವು ಪ್ರಾತಿನಿಧ್ಯ ಮಾಡುವುದಿಲ್ಲವೋ ಯಾರ ಬಗ್ಗೆ ಚಿಂತನೆಯನ್ನು ಮಾಡುವುದಿಲ್ಲವೋ ಅವರುಗಳು ವಿಚಾರ ಬಂದರೆ ಬಹುತೇಕ ಅವರೆಷ್ಟು ನೇರವಾಗಿ ಬಹಳ ಸ್ಪಷ್ಟವಾಗಿ ಮಾತನಾಡುವಂಥ ಆ ಧ್ವನಿಯನ್ನು ನಾವು ಇವತ್ತಿಗೂ ಸದನದಲ್ಲಿ ಕೇಳುತ್ತಿಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ. ಆ ಧ್ವನಿ ಇವತ್ತು ಖಾಯಂ ಆಗಿ ಇಲ್ಲದೇ ಇರುವ ಹಾಗೆ ಇವರನ್ನು ದೇವರು ತನ್ನೆಡೆಗೆ ತೆಗೆದುಕೊಂಡಿದ್ದಾನೆ. ಅದರ ಜೊತೆಗೆ ನಮ್ಮ ಅವರ ಸಂಬಂಧ ನರಗುಂದ ಟೆಕ್ಸ್‌ಟೈಲ್ ಮಿಲ್‌ಗೆ ಕಾರ್ಮಿಕ ನಾಯಕನಾಗಿ ಬಂದಾಗ ಅವರನ್ನು ನೋಡಿದ್ದೇನೆ. ಹಲವಾರು ಸಾರಿ ನಾನು ಶಾಸಕನಾಗಿದ್ದಾಗ ನೋಡಿದ್ದೇನೆ. ಅವರು ಬರೀ ಕಾರ್ಮಿಕರನ್ನು ಮಾತ್ರ ಪ್ರಚೋದನೆ ಮಾಡುತ್ತಿದ್ದರು ಅವರು ಪರವಾಗಿ ಮಾತ್ರ ಹೇಳುತ್ತಿದ್ದರು ಎನ್ನುವುದನ್ನು ನಾನು ಕಾಣಲಿಲ್ಲ. ಅವರು ಕಾರ್ಮಿಕರನ್ನು ಗದರಿಸಿ ನೀವು ಇದೇ ರೀತಿ ಮುಂದೆ ಹೋದರೆ ಒಂದು ರೀತಿ ಮಿಲ್ಲೇ ಬಂದ್ ಆಗಿ ಹೋಗುತ್ತದೆ ಎಂದು ಹೇಳುತ್ತಿದ್ದರು. ಹಾಗೇ ಒಂದು ರೀತಿ ರಚನಾತ್ಮಕವಾಗಿ ಅವರು ಪೂರಕವಾಗಿ ಅವರ ವಿಚಾರಗಳನ್ನು ಸ್ಪಷ್ಟವಾಗಿ ಹೇಳುತ್ತಿದ್ದರು. ಅದು ಕೂಡ 1980 ರೈತ ಚಳುವಳಿಯ ನಂತರ ಅದರಲ್ಲಿ ಅವರು ಸಕ್ರಿಯವಾಗಿ ಭಾಗಿಯಾಗಿದ್ದರು. ಅಷ್ಟೇ ಅಲ್ಲ, ದಾವಣಗೆರೆಯಲ್ಲಿ ನಾವೆಲ್ಲಾ ಬರುವಾಗ ಆ ಜಾಥಾದಲ್ಲಿ ಜನರು ಮೆರವಣಿಗೆಯಲ್ಲಿ ನಡೆಯುತ್ತಾ ಬರುವಾಗ ಅದ್ಭುತವಾಗಿ ಜನರನ್ನು ಸಂಘಟನೆ ಮಾಡಿದ್ದನ್ನು ಅಲ್ಲಿ ವ್ಯವಸ್ಥೆ ಮಾಡಿದ್ದನ್ನು ಆ ಒಂದು ಹೋರಾಟದಲ್ಲಿ ಜನರನ್ನು ಭಾಗವಹಿಸುವಂಥ ರೀತಿ ಮಾಡಿದ್ದನ್ನು ನಾನು ನೆನೆಯುತ್ತಾ ಅವರು ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ) : ಮಾನ್ಯ ಅಧ್ಯಕ್ಷರೇ ಈ ದಿವಸ ಮಂಡಿಸಿರುವ ಶ್ರೀ ಎಸ್. ಪುಟ್ಟಸ್ವಾಮಿಯವರು ಶ್ರೀ ಪಂಪಾಪತಿಯವರ ಸಂತಾಪ ಸೂಚನೆಗೆ ಧ್ವನಿಗೂಡಿಸುತ್ತಾ ಶ್ರೀಮಾನ್ ಎಸ್. ಪುಟ್ಟಸ್ವಾಮಿಯವರು ನಮ್ಮ ಭಾಗದ ಹಿರಿಯ ಮುಖಂಡರಾಗಿ ಸೇವೆಯನ್ನು ಮಾಡಿದಂಥವರು. ಕರ್ನಾಟಕ ರಾಜ್ಯದ ವಿಧಾನಸಭೆಗೆ ನಾಲ್ಕು ಬಾರಿ 1967 ರಿಂದ 1971, 1972-77, 1983-85, ಹಾಗೆ 1985-89 ರವರೆಗೆ ಈ ಒಂದು ರಾಜ್ಯದ ವಿಧಾನಸಭೆಯಲ್ಲಿ ಸೇವೆಯನ್ನು ಮಾಡಿದಂಥವರು. ಅವರ 31-7-2002 ರಂದು ನಮ್ಮನ್ನೆಲ್ಲಾ ಅಗಲಿ ಹೋಗಿದ್ದಾರೆ. ಈ ನಾಲ್ಕು ಸಂದರ್ಭಗಳು ಕೂಡ ಶ್ರೀಮಾನ್ ಪುಟ್ಟಸ್ವಾಮಿಯವರು ನಮ್ಮ ಪೂಜ್ಯ ತಂದೆಯವರಾದಂಥ ಶ್ರೀಮಾನ್ ಬಿ. ರಾಚಯ್ಯನವರು ಆ ಭಾಗದ ಶಾಸಕರಾಗಿ, ಮಂತ್ರಿಗಳಾಗಿ ಸೇವೆಯನ್ನು ಮಾಡಿದಂಥ ಸಂದರ್ಭದಲ್ಲಿ ತಾಲ್ಲೂಕಿನ ಮತ್ತು ಅವಿಭಾಜ್ಯ ಮೈಸೂರು ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಬಹಳ ಸಹಕಾರಿಯಾಗಿದ್ದಂಥವರು. ಪ್ರಥಮವಾಗಿ ವಿಧಾನಸಭೆಯನ್ನು ಪ್ರವೇಶಿಸಿದ ಶ್ರೀಮಾನ್ ಪುಟ್ಟಸ್ವಾಮಿಯವರು ಪಕ್ಷೇತರರಾಗಿ ಸದನವನ್ನು ಪ್ರವೇಶ ಮಾಡಿದಂಥವರು.

ನಂತರ ಅವತ್ತು ಸಂಸ್ಥಾ ಕಾಂಗ್ರೆಸ್ಸನ್ನು ಸೇರಿದಂಥ ಶ್ರೀ ಎಸ್. ಪುಟ್ಟಸ್ವಾಮಿಯವರು ಹಲವಾರು ಏಳುಬೀಳುಗಳನ್ನು ರಾಜಕೀಯದಲ್ಲಿ ಅನುಭವಿಸಿದಂಥ ಮೃದು ಸ್ವಭಾವದ ವ್ಯಕ್ತಿ ಅವರಾಗಿದ್ದರು. ಪಕ್ಷದ ಟಿಕೆಟ್ ಕೈತಪ್ಪಿದಾಗಲೂ ಕೂಡ ಅವರು ಅಸಮಾಧಾನವನ್ನು ತೋರದೆ ನಗುನಗುತ್ತಲೇ ಎಲ್ಲಾ ನೋವುಗಳನ್ನು ಅನುಭವಿಸಿದಂಥ ದೊಡ್ಡ ಮನಸ್ಸಿನ ವ್ಯಕ್ತಿ ಅವರಾಗಿದ್ದರು. ನಾಲ್ಕು ಬಾರಿ ಈ ಸದನವನ್ನು ಅವರು ಪ್ರತಿನಿಧಿಸಿದ್ದರೂ ಕೂಡ ಅವರು ಯಾವುದೇ ಒಂದು ಸಚಿವರ ಸ್ಥಾನಕ್ಕೆ ಆ ವ್ಯಾಮೋಹಕ್ಕೆ ಒಳಗಾಗದೆ ರಾಜ್ಯದ ದೃಷ್ಟಿಯಿಂದ ಬಹಳ ಕಟ್ಟುನಿಟ್ಟಿನಿಂದ ಸೇವೆಯನ್ನು ಮಾಡಿದಂಥ ಶ್ರೀ ಪುಟ್ಟಸ್ವಾಮಿಯವರು ಈ ಒಂದು ರಾಜ್ಯದ ಅತ್ಯಂತ ಪ್ರಾಮಾಣಿಕ ಜನನಾಯಕರಾಗಿ ಅವರು ಸೇವೆಯನ್ನು ಮಾಡಿದಂಥವರು. ಇವತ್ತು ಅವರು ನಮ್ಮನ್ನು ಅಗಲಿದ ಸಂದರ್ಭದಲ್ಲಿ ಆ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ಭಗವಂತನು ಅವರ ಕುಟುಂಬದ ವರ್ಗದವರಿಗೆ ದಯಪಾಲಿಸಲಿ ಎಂದು ನಾನು ಪ್ರಾರ್ಥಿಸಿಕೊಂಡು ಹಾಗೆಯೇ ಶ್ರೀ ಪಂಪಾಪತಿಯವರು ಈ ರಾಜ್ಯದ ಹಿರಿಯ ಸದಸ್ಯರಾಗಿ ಕಾರ್ಮಿಕ ಮುಖಂಡರಾಗಿ ಸಮಾಜದಲ್ಲಿ ಬಹಳ ಪ್ರಾಮಾಣಿಕವಾಗಿ ಕಾರ್ಮಿಕರ ದೃಷ್ಟಿಯಿಂದ ಸೇವೆಯನ್ನು ಮಾಡಿದಂಥ ಶ್ರೀ ಪಂಪಾಪತಿಯವರು ಕೂಡ ಇವತ್ತು ನಮ್ಮನ್ನೆಲ್ಲಾ ಅಗಲಿ ಹೋಗಿರತಕ್ಕ ಸಂದರ್ಭದಲ್ಲಿ ಈ ಇಬ್ಬರೂ ನಾಯಕರು ಹಾಕಿ ಕೊಟ್ಟಂಥ ಒಂದು ಒಳ್ಳೆಯ ರಾಜಮಾರ್ಗದಲ್ಲಿ ರಾಜಕಾರಣವನ್ನು ಮಾಡಿಕೊಂಡು ನಾವು ಇವತ್ತು ಯುವ ಪೀಳಿಗೆ ಸಾಗುವಂಥ ನಿರ್ದೇಶನವನ್ನು ಅವರು ನೀಡಿ ಹೋಗಿದ್ದಾರೆ. ಇವತ್ತು ಈ ರಾಜ್ಯದ ಕಾರ್ಮಿಕ ನಾಯಕರನ್ನು ಕಳೆದುಕೊಂಡಿದ್ದೇವೆ. ಈ ಇಬ್ಬರ ಕುಟುಂಬ ವರ್ಗದವರಿಗೂ ಆ ಒಂದು ಶಕ್ತಿಯನ್ನು ಭರಿಸತಕ್ಕ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) : ಮಾನ್ಯ ಅಧ್ಯಕ್ಷರೆ, ಶ್ರೀ ಪಂಪಾಪತಿ ಹಾಗೂ ಶ್ರೀ ಎಸ್. ಪುಟ್ಟಸ್ವಾಮಿ ಅವರ ಬಗ್ಗೆ ಇಟ್ಟಿರುವಂತಹ ಸರ್ಕಾರದ ಸಂತಾಪ ಸೂಚನೆಗಳನ್ನು ಬೆಂಬಲಿಸುತ್ತಾ ಕಾಮ್ರೇಡ್ ಪಂಪಾಪತಿಯವರು ದಾವಣಗೆರೆಯಲ್ಲಿ ಕಾರ್ಮಿಕ ನಾಯಕರಾಗಿ ದೀನ ದಲಿತರು ತುಳಿತಕ್ಕೆ ಒಳಪಟ್ಟಂತಹ ಬಡವರ ಪರವಾಗಿ ತುಂಬಾ ಹೋರಾಟವನ್ನು ಮಾಡಿದ್ದರು. ಹೋರಾಟವನ್ನು ಮಾಡಿದಂತಹ ಸಂದರ್ಭದಲ್ಲಿ 1968ನೇ ಇಸವಿಯೊಳಗೆ ಸಾಹುಕಾರರಿಗೂ ಮತ್ತು ಅಲ್ಲಿನ ಕಾರ್ಮಿಕರಿಗೂ ಹೊಡೆದಾಟ ಆದಂತಹ ಸಂದರ್ಭದಲ್ಲಿ ಪಂಪಾಪತಿಯವರ ಪರವಾಗಿ ಇದ್ದವರು ಸತ್ತರು. ಇವತ್ತು ತಾನು ಬದುಕಿದ್ದ ಮೇಲೆ ಎಷ್ಟು ಹೋರಾಟ ಮಾಡಬೇಕು ಎನ್ನತಕ್ಕ ಒಂದು ಹೋರಾಟದಿಂದ ಜೀವನದ ಉದ್ದಕ್ಕೂ ಸಹ ಬಡವರ ಪರವಾಗಿ, ಕಾರ್ಮಿಕರ ಪರವಾಗಿ ಸಾಕಷ್ಟು ಸಾಹುಕಾರರ ವಿರುದ್ಧ ಹೋರಾಟ ಮಾಡಿದಂತಹ ವ್ಯಕ್ತಿ ಎಂದರೆ ಕರ್ನಾಟಕದಲ್ಲಿ ಮೊದಲನೆಯವರು ಎಂದು ಹೇಳಬಹುದು. ಆ ರೀತಿಯ ಹೋರಾಟ ಮಾಡಿದಂತಹ ಪಂಪಾಪತಿ ಅವರು ಇವತ್ತು ದಾವಣಗೆರೆಯಲ್ಲಿ ನಗರಸಭಾ ಸದಸ್ಯರಾಗಿ, ನಗರಸಭಾ ಅಧ್ಯಕ್ಷರಾಗಿ ಮೂರು ಸಲ ಶಾಸಕರಾಗಿ ಶ್ರೀ ಸಾಮಾನ್ಯರ ಜೀವನಕ್ಕೆ ಸ್ಪಂದಿಸುವಂತಹ ಒಬ್ಬ ಶಾಸಕರಾಗಿ ಈ ರಾಜ್ಯದಲ್ಲಿ ಉತ್ತಮವಾದಂತಹ ಒಂದು ಸೇವೆ ಮಾಡಿದಂತಹವರು ಕಾಮ್ರೇಡ್ ಪಂಪಾಪತಿ ಅವರು ಅವತ್ತು ದಾವಣಗೆರೆ ಭಾಗದಲ್ಲಿ ಸಾಹುಕಾರರುಗಳ ವಿರುದ್ಧ ಯಾರೂ ಸಹ ಧ್ವನಿ ಎತ್ತುವಂತಹ ಸಂದರ್ಭ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಶ್ರೀಮಂತರ ವಿರುದ್ಧ ಹೋರಾಟ ಮಾಡಿ ಬಡವರನ್ನು ಸಂಘಟನೆ ಮಾಡಿ ತಮ್ಮ

ಒಂದು ವ್ಯಕ್ತಿತ್ವವನ್ನು ಉಳಿಸಿಕೊಂಡು ಬಂದಂತಹ ಪಂಪಾಪತಿ ಅವರು ಶ್ರೀಸಾಮಾನ್ಯರು ಮೆಚ್ಚುವ ರೀತಿಯಲ್ಲಿ ಎಲ್ಲಾ ರೀತಿಯ ಕೆಲಸಗಳನ್ನು, ಹೋರಾಟ ಮಾಡಿ ಮಾಡಿದಂತಹವರು. ತಮ್ಮ ಜೀವನದ ಉದ್ದಕ್ಕೂ ಸಹ ಹುಟ್ಟುಹೋರಾಟ ಮಾಡಿದಂತಹ ಒಬ್ಬ ವ್ಯಕ್ತಿ ಎಂದರೆ ಅವರು ಕಾಮ್ರೇಡ್ ಪಂಪಾಪತಿ ಅವರು. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅದೇ ರೀತಿ ಶ್ರೀ ಪುಟ್ಟಸ್ವಾಮಿ ಅವರು ಸಹ ಹಿರಿಯ ರಾಜಕಾರಣಿಗಳು. ತುಂಬು ಜೀವನವನ್ನು ನಡೆಸಿದ್ದಾರೆ. ಅವರ ಆತ್ಮಕ್ಕೆ ಸಹ ಶಾಂತಿ ಸಿಗಲಿ. ಅವರ ದುಃಖಿತಪ್ತ ಕುಟುಂಬವರ್ಗಕ್ಕೆ ಭಗವಂತ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಹಾರೈಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ತನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್.ಸಿ. ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಅಧ್ಯಕ್ಷರೆ, ಇವತ್ತು ಮಾಡಿಸಿರತಕ್ಕ ಎರಡು ಸಂತಾಪ ಸೂಚನೆಗಳು, ಒಂದು ಶ್ರೀ ಪುಟ್ಟಸ್ವಾಮಿ ಹಾಗೂ ಇನ್ನೊಂದು ಪಂಪಾಪತಿ ಅವರದ್ದು ಈ ಸಂತಾಪ ಸೂಚನಾ ನಿರ್ಣಯ ಬೆಂಬಲಿಸುತ್ತೇನೆ. ಸನ್ಮಾನ್ಯ ಪುಟ್ಟಸ್ವಾಮಿ ಅವರು ಒಬ್ಬ ಧೀಮಂತ ರಾಜಕಾರಣಿ. ಪ್ರಾಮಾಣಿಕತೆಗೆ, ಶಿಸ್ತಿಗೆ, ಸಜ್ಜನಿಕೆಗೆ ಹೆಸರಾಂತ ವ್ಯಕ್ತಿ. ಇವರು ತಮ್ಮ ರಾಜಕೀಯ ಜೀವನವನ್ನು ಸ್ವಾತಂತ್ರ್ಯ ಹೋರಾಟಗಾರರಾಗಿ ಚಿಮ್ಮಿಕೊಂಡು ಸ್ವಾತಂತ್ರ್ಯಕ್ಕೋಸ್ಕರ ಬಹಳ ಹೋರಾಟವನ್ನು ಕೂಡ ನಡೆಸಿ ತದ ನಂತರ ತಾಲ್ಲೂಕಿನ ವಿವಿಧ ಸಂಸ್ಥೆಗಳಲ್ಲಿ ಹಾಗೂ ಟಿಎಪಿಸಿಎಂಎಸ್, ಪಿಎಲ್‌ಡಿ ಬ್ಯಾಂಕು ಹಾಗೂ ಜಿಲ್ಲಾ ಸಹಕಾರ ಬ್ಯಾಂಕು, ಹೀಗೆ ಹಂತಹಂತವಾಗಿ ಬಂದು ಪಕ್ಷೇತರ ಸದಸ್ಯರಾಗಿ ಶಾಸಕರಾದರು. ತದನಂತರ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ನಂತರ ಒಬ್ಬ ಶಿಸ್ತಿನ ಸಿಪಾಯಿ ಆಗಿದ್ದರು. ಶಿಸ್ತಿಗೆ ಮತ್ತೊಂದು ಹೆಸರು ಪುಟ್ಟಸ್ವಾಮಿ ಅವರು ಎಂದು ನಮ್ಮ ಹಳೆಯ ಕಾಂಗ್ರೆಸ್‌ನ ನಾಯಕರುಗಳೆಲ್ಲರ ಪೈಕಿ ಪುಟ್ಟಸ್ವಾಮಿ ಎಂದರೆ ಶಿಸ್ತಿಗೆ ಹೆಸರಾದವರು ಎಂದು ಅಲ್ಲಿ ನಮ್ಮ ಹಳೆಯ ಮೈಸೂರು ಜಿಲ್ಲೆಯಲ್ಲಿ ಹೆಸರಾಗಿರತಕ್ಕವರು. ಅವರು ಸುಮಾರು 10-15 ವರ್ಷ ನಮ್ಮ ಅವಿಭಾಜ್ಯ ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅನೇಕ ಯುವ ಕಾಂಗ್ರೆಸ್ಸಿಗರನ್ನು ಅಲ್ಲಿ ಅವರ ಗರಡಿಯಲ್ಲಿ ಪಳಗಿಸಿ ಪ್ರಾಮಾಣಿಕತೆಯ ಒಂದು ಬಿಂಭವನ್ನು ಪ್ರತಿಬಿಂಬಿಸಿದ್ದಾರೆ. ಅವರು ನಾಲ್ಕು ಸಲ ಈ ಸದನದ ಸದಸ್ಯರಾದರೂ ಸಹ ಯಾವತ್ತೂ ಕೂಡ ಸಚಿವ ಪದವಿಗೆ ಆಸೆ ಮಾಡಿದವರಲ್ಲ, ಅಧಿಕಾರಕ್ಕೂ ಆಸೆ ಮಾಡಿದವರಲ್ಲ. ಅವರು ನಮ್ಮ ಪೂಜ್ಯ ತಂದೆಯವರಾಗಿದ್ದ ಶ್ರೀ ಚನ್ನಬಸಪ್ಪನವರ ನಿಕಟವರ್ತಿಯಾಗಿದ್ದು ಅನೇಕ ಸಲ ಅವರಿಗೆ ಒಂದು ರಾಜ್ಯ ಮಟ್ಟದ ಪದವಿಯನ್ನು ಕೊಡಲು ಮುಂದಾದರು, ಸನ್ಮಾನ್ಯ ಗುಂಡೂರಾವ್ ಅವರೂ ಸಹ ಮುಖ್ಯಮಂತ್ರಿಗಳು ಆಗಿದ್ದಾಗ ಅವರು ಪದವಿ ನಿರಾಕರಿಸತಕ್ಕಂಥ ನಿದರ್ಶನಗಳು ಕಾಣುತ್ತವೆ. ಇವತ್ತಿನ ದಿವಸಗಳಲ್ಲಿ ನಾವು ಮೊದಲನೇ ಸಲ ಶಾಸನ ಸಭೆಗೆ ಬಂದರೂ ಸಹ ನಮಗೆ ಮಂತ್ರಿ ಪದವಿ ಬೇಕು ಎಂದು ಹೇಳಿ ಕೇಳತಕ್ಕವರು ಜಾಸ್ತಿ ಆಗಿರತಕ್ಕಂಥ ಈ ಒಂದು ಕಾಲದಲ್ಲಿ ಅವರು ನಾಲ್ಕು ಸಾರಿ ಈ ಸದನದಲ್ಲಿದ್ದರೂ ಕೂಡ ಮಂತ್ರಿ ಪದವಿಗೆ ಆಸೆ ಮಾಡಲಿಲ್ಲ ಎಂದರೆ ಅವರಲ್ಲಿ ಎಷ್ಟು ಸೇವಾ ಮನೋಭಾವ ಇತ್ತು ಎನ್ನುವುದಕ್ಕೆ ಒಂದು ಸಾಕ್ಷಿ ಆಗಿದೆ. ಸನ್ಮಾನ್ಯ ಅಧ್ಯಕ್ಷರೆ ಅವರದ್ದು simple living high thinking ಆಗಿತ್ತು. ಚಾಮರಾಜನಗರಕ್ಕೆ ಅವರ ಮನೆಗೆ ಹೋದರೆ ಕಾಂಗ್ರೆಸ್ ಕಛೇರಿ ಇದ್ದ ಹಾಗೆ ಇತ್ತು. ಮನೆಯಲ್ಲಿಯೇ ಕಾಂಗ್ರೆಸ್ ಕಛೇರಿಯನ್ನು ಮಾಡಿಕೊಂಡಿದ್ದಂತಹ ಒಬ್ಬ ನಿಷ್ಪಾವಂತ ನಾಯಕರು. ಅವರು ನಮ್ಮನ್ನು ಅಗಲಿದ್ದಾರೆ. ಅವರು ಅಗಲಿರುವುದರಿಂದ ಇವತ್ತು ನಮ್ಮ

ಕರ್ನಾಟಕದ ಜನತೆಗೆ ಅಪಾರವಾದಂತಹ ನಷ್ಟವಾಗಿದೆ. ಅವರು ಇಟ್ಟಂತಹ ಕಾಳಜಿ, ಅವರು ಇಟ್ಟಂತಹ ಒಂದು ನಾಯಕ ಗುಣಗಳಿಗೆ ಸೇವಾ ಮನೋಭಾವ ನಮಗೆಲ್ಲರಿಗೂ ಕೂಡ ನಾಂದಿ ಆಗಬೇಕೆಂದು ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ. ಅವರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ತದನಂತರ ಪಂಪಾಪತಿ ಅವರೂ ಕೂಡ ಈ ಸದನದಲ್ಲಿ ಕಾಮ್ರೇಡ್ ಪಂಪಾಪತಿ ಎಂದು ಹೆಸರಾದಂತಹವರು. ಅವರು ಕಾರ್ಮಿಕರಿಗೆ ಕೃಷಿ ಕಾರ್ಮಿಕರಿಗೆ, ಬಡವರಿಗೆ ಬಹಳ ಬಂಧುವಾಗಿದ್ದಂಥವರು. ಅರರೂ ಕೂಡ ನಿಧನರಾಗಿರತಕ್ಕಂಥ ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಸಹಿಸಲು ಭಗವಂತ ಶಕ್ತಿ ಕೊಡಲಿ ಎಂದು ಈ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ.

+ ಶ್ರೀ ಎ.ಎಸ್. ಗುರುಸ್ವಾಮಿ (ಚಾಮರಾಜ) : ಸನ್ಮಾನ್ಯ ಅಧ್ಯಕ್ಷರೇ, ಪುಟ್ಟಸ್ವಾಮಿ ಅವರ ಬಗ್ಗೆ ಈಗಾಗಲೇ ಅವರ ಜೊತೆಯಲ್ಲಿ ಇದ್ದಂತಹವರು, ನಿಕಟವರ್ತಿಗಳೆಲ್ಲಾ ಮಾತನಾಡಿದ್ದಾರೆ. ನಾನಾದರೂ ಕೂಡ ಶ್ರೀಮಾನ್ ಎಸ್. ಪುಟ್ಟಸ್ವಾಮಿ ಅವರ ಬಗ್ಗೆ ಹೇಳಬೇಕಾಗಿದೆ. ಅವರು ಡಿಸಿಸಿ ಪ್ರೆಸಿಡೆಂಟ್ ಆಗಿ ಸುಮಾರು 8-9 ವರ್ಷ ಇದ್ದರು. ಅವರ ಕೈಕೆಳಗೆ ನಾನು ಜನರಲ್ ಸೆಕ್ರಟರಿಯಾಗಿ ಅಷ್ಟೂ ವರ್ಷ ಕೆಲಸ ಮಾಡುವಂತಹ ಒಂದು ಅವಕಾಶ ನನಗೆ ಸಿಕ್ಕಿತ್ತು. ಶ್ರೀ ಪುಟ್ಟಸ್ವಾಮಿ ಅವರು ಡಿಸಿಸಿ ಬ್ಯಾಂಕ್ ಪ್ರೆಸಿಡೆಂಟ್ ಆಗಿದ್ದಂತಹ ಸಂದರ್ಭದಲ್ಲಿ ಅವರ ಸರಳ ಸಜ್ಜನಿಕೆ, ಅವರ ನೇರವಾದಂತಹ ನಡೆನುಡಿಗಳು ಮತ್ತು ಈ ಪೊಲಿಟಿಶಿಯನ್ ಅವರ ಹತ್ತಿರ ಇರತಕ್ಕಂಥಹ ಕೆಲವು ಗುಣಗಳು ಎಂದು ಏನು ಹೇಳುತ್ತಾರೆ, ಅದನ್ನು ನಾನು ಅವರಲ್ಲಿ ಕಾಣಲೇ ಇಲ್ಲ. ಶ್ರೀಮಾನ್ ಪುಟ್ಟಸ್ವಾಮಿಯವರು was a social woker ಜನಗಳಿಗೆ ಸಹಾಯ ಸಹಾಯ ಮಾಡಬೇಕು ಎನ್ನತಕ್ಕ ಒಂದೇ ಒಂದು ಗುರಿಯಿಂದ ಅವರು ರಾಜಕಾರಣ ಎಂದು ಕರೆಸಿಕೊಳ್ಳುತ್ತಿದ್ದರೇ ಹೊರತು he was never seen like a politician ಇದು ನಾನು ಅವರ ಕೈಕೆಳಗೆ ಹತ್ತು ವರ್ಷ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿದಂತಹ ಸಂದರ್ಭದಲ್ಲಿ ಬಂದಂತಹ ಅನುಭವ. ರಾಜಕಾರಣಿಗಳು ಯಾವರೀತಿ ಇರಬೇಕು? ಯಾವ ರೀತಿ ಸರ್ವೀಸ್ ಮಾಡಬೇಕು ಎನ್ನುವುದು ಅವರ ಹತ್ತಿರದಿಂದ ಕಲಿಯಬೇಕು ಎಂದು ನಾನು ಬಹಳಷ್ಟು ಹತ್ತಿರದಿಂದ ಹತ್ತು ವರ್ಷಗಳ ಅನುಭವದಿಂದ ನೋಡಿದ್ದೇನೆ. ನಂತರ ನಾನು ವೈಸ್ ಪ್ರೆಸಿಡೆಂಟ್ ಆಗಿ 4-5 ವರ್ಷ ಡಿಸಿಸಿ ನಲ್ಲಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಗಾಂಧೀಜಿ ಅವರ ಒಂದು ಪ್ರಿನ್ಸಿಪಲ್ ನನಗೆ ಜ್ಞಾಪಕ ಬರುತ್ತದೆ. "Politics without principle is not at all politics." ಎಂದೇನು ಗಾಂಧೀಜಿ ಹೇಳಿದರು, ಆ ವಾಕ್ಯ 150 ಪರ್ಸೆಂಟ್ ಇವರಿಗೆ ಅನ್ವಯ ಆಗುತ್ತದೆ ಎನ್ನತಕ್ಕ ಮಾತಿನಲ್ಲಿ ಎರಡು ಇಲ್ಲ ಎಂಬ ಮಾತನ್ನು ಹೇಳುತ್ತೇನೆ. ಕಾಂಗ್ರೆಸ್ ತತ್ವದಲ್ಲಿ 100 ಪರ್ಸೆಂಟ್ ಬಿಲೀಫ್ ನಂಬಿಕೆ ಇದ್ದಂಥವರು ಎಂದರೆ ಶ್ರೀಮಾನ್ ಪುಟ್ಟಸ್ವಾಮಿ ಅವರು ನಾವೆಲ್ಲಾ ಕಾಂಗ್ರೆಸ್ ಮೆಂಬರ್‌ಶಿಪ್ ಆಗಬೇಕಾದರೆ ಮೊದಲ ಮೊದಲು ಕೆಲವು ನಂಬಿಕೆಗಳು ಇದ್ದವು. ಇದನ್ನೆಲ್ಲಾ ಒಪ್ಪಿಕೊಂಡಿದ್ದೇವೆ, ಇದನ್ನೆಲ್ಲಾ ಮಾಡುವುದಿಲ್ಲ, ಅದನ್ನು ಮಾಡುವುದಿಲ್ಲ ಎಂದು ನಾವೆಲ್ಲಾ ಬರೆಯುತ್ತೇವೆ, ಒಪ್ಪಿಕೊಳ್ಳುತ್ತೇವೆ. ಅದನ್ನು ಅಷ್ಟೂ ಚಾಚೂ ತಪ್ಪದೇ ನಡೆಸಿಕೊಟ್ಟವರು ಎಂದರೆ ಶ್ರೀಮಾನ್ ಪುಟ್ಟಸ್ವಾಮಿ ಅವರು. ಅವರು ನಾಲ್ಕು ಬಾರಿ ನಮ್ಮ ವಿಧಾನಸಭಾ ಸದಸ್ಯರಾಗಿ ಸೇವೆ ಸಲ್ಲಿಸಿರುವುದನ್ನು ನಾವೆಲ್ಲರೂ ನೋಡಿದ್ದೇವೆ.

ಇದಲ್ಲದೇ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಎಂದು ಹೇಳಿ ಹಿಂದೆ ಏನು ಇತ್ತು ಅವರೂ ಕೂಡ ಅಲ್ಲಿ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್ ಆಗಿದ್ದರು. ನಾನು ಮೈಸೂರಿನಲ್ಲಿ ಮೈಸೂರು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್ ಆಗಿ ಕೆಲಸ ಮಾಡಿದಂತಹ ಸಂದರ್ಭದಲ್ಲಿ ನಾವು ಅವರೂ ಜೊತೆ ಜೊತೆಯಾಗಿ ಕೆಲಸ ಮಾಡುವಂತಹ ಅವಕಾಶ ಸಿಕ್ಕಿತ್ತು. ಅಂತಹ ಪುಟ್ಟಸ್ವಾಮಿ ಅವರ ಒಂದು ನಡೆನುಡಿಗಳನ್ನು ಬಹುಶಃ ನಾವು ಇವತ್ತಿನ ರಾಜಕಾರಣಿಗಳು ಬಹಳಷ್ಟು ಜನ ಆದರ್ಶವಾಗಿ ಇಟ್ಟುಕೊಂಡರೆ ಬಹುಶಃ ರಾಜಕಾರಣ ಸರಳೀಕರಣ ಆಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ ಎಂದು ನಾನು ಹೇಳುತ್ತೇನೆ. ಇನ್ನೊಂದು ಬಹಳ ಮಹತ್ವಪೂರಿತವಾಗಿ ಹೇಳುವುದು ಎಂದರೆ ಪುಟ್ಟಸ್ವಾಮಿ ಅವರು ಹಿಡಿದಿದ್ದನ್ನು ಬಿಡುವವರಲ್ಲ. ಎಂತಹ ಕಠಿಣ ವ್ಯಕ್ತಿ ಅಂದರೆ ಶ್ರೀಮಾನ್ ದೇವರಾಜು ಅರಸ್ ಅವರು ಆ ಕಾಲದಲ್ಲಿ ಪವರ್‌ಫುಲ್ ಪೊಲಿಟಿಶಿಯನ್, ಪವರ್‌ಫುಲ್ ಲೀಡರ್ ಮೈಸೂರು ಜಿಲ್ಲೆಗೆ ಆಗಿದ್ದರು. ಅವಿಭಾಜ್ಯ ಡಿಸ್ಟ್ರಿಕ್ಟ್ ಆಗಿದ್ದಂತಹ ಸಂದರ್ಭದಲ್ಲಿನ ಮಾತುಗಳು ಇವು ಇವತ್ತು ಚಾಮರಾಜನಗರ ಬೇರೆ, ನಾವು ಬೇರೆ ಎನ್ನತಕ್ಕ ಪ್ರಶ್ನೆ ಇಲ್ಲ. ಅನ್‌ಡಿವೈಡೆಡ್ ಕಾಂಗ್ರೆಸ್ ಮೈಸೂರು ಡಿಸ್ಟ್ರಿಕ್ಟ್ ಆದಂತಹ ಸಂದರ್ಭದಲ್ಲಿ ಅವರು ದೇವರಾಜು ಅರಸ್ ಅವರಂತಹ ಪವರ್‌ಫುಲ್ ಪೊಲಿಟಿಶಿಯನ್, ಲೀಡರ್ ಆಗಿದ್ದಂತಹ ಕಾಲದಲ್ಲಿ ಒಂದು ಸಲ ಡಿಸಿಸಿ ಎಲೆಕ್ಷನ್ ಆದಾಗ ಒಂದು ಕಡೆಗೆ ಶ್ರೀ ಕೆಂಚೇಗೌಡರನ್ನು ಹಾಕಿದರು. ಅವರ ವಿರುದ್ಧವಾಗಿ ಇವರು ನಿಂತು ಕೊಂಡರು. ಆಗ ನಾವೆಲ್ಲಾ ಕೆಲಸ ಮಾಡಿದೆವು. ಅವರದ್ದು ಒಂದೇ ಒಂದು ಪ್ರಿನ್ಸಿಪಲ್. ಶ್ರೀ ಕೆಂಚೇಗೌಡರು ಬೇರೆ ಪಾರ್ಟಿಯಿಂದ ಬಂದವರು ಎಂಬ ಒಂದೇ ಒಂದು ಕಾರಣದಿಂದ ಅವರಿಗೆ ಪುಟ್ಟಸ್ವಾಮಿ ಅವರು ಸಪೋರ್ಟ್ ಮಾಡಲು ಒಪ್ಪಲಿಲ್ಲ. ಅಂತಹ ಧಾಷ್ಟ್ರ್ಯತೆ ಇದ್ದಂತಹ ಶ್ರೀಮಾನ್ ಪುಟ್ಟಸ್ವಾಮಿ ಅವರನ್ನು ನಾವೆಲ್ಲಾ ಕಳೆದುಕೊಂಡಿದ್ದೇವೆ. ಇವತ್ತಿನ ನಮ್ಮ ಕಲುಷಿತ ರಾಜಕೀಯ ವಾತಾವರಣದಲ್ಲಿ ಅವರು ಇನ್ನಷ್ಟು ವರ್ಷ ಇದ್ದು ನಮಗೆಲ್ಲಾ ಆದರ್ಶಪ್ರಾಯರಾಗಿದ್ದರೆ ಬಹಳ ಚೆನ್ನಾಗಿತ್ತು. ಎರಡನೆಯದು ಶ್ರೀ ಪಂಪಾಪತಿ ಅವರ ಬಗ್ಗೆ ಹೇಳುವುದಾದರೆ ನಮಗೇನೂ ನಿಕಟ ಸಂಪರ್ಕ ಇಲ್ಲ. ಅವರ ವಿಚಾರ ನಾನು ತಿಳಿದುಕೊಂಡಿದ್ದೇನೆ. ಅವರಂತೆ ಕಟ್ಟಾ ಕಮ್ಯುನಿಸ್ಟ್ ಪಾರ್ಟಿಗಾಗಿ ದುಡಿದಂತವರು ಮತ್ತೊಬ್ಬರು ಇಲ್ಲ ಎಂಬ ಮಾತನ್ನು ನಾನು ಕೇಳಿದ್ದೇನೆ, ತಿಳಿದುಕೊಂಡಿದ್ದೇನೆ. ಇಷ್ಟನ್ನು ಹೇಳಿ ಶ್ರೀಮಾನ್ ಪುಟ್ಟಸ್ವಾಮಿ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಸಭೆಯ ಮುಖಾಂತರ, ತಮ್ಮ ಮುಖಾಂತರ ಭಗವಂತನಲ್ಲಿ ಪ್ರಾರ್ಥಿಸಿಕೊಂಡು ನಾನು ಎರಡು ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ಇದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

12.00 ಪಿ.ಎಂ

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಸನ್ಮಾನ್ಯ ಅಧ್ಯಕ್ಷರೆ, ಸಂತಾಪ ಸೂಚನೆಯನ್ನು ತಂದಿರುವುದು ನಮ್ಮ ಸಂಪ್ರದಾಯಕ್ಕೆ ಒಂದು ಒಳ್ಳೆಯ ಒತ್ತು ಕೊಟ್ಟಂತಾಗಿದೆ. ಈ ದಿವಸ ದಿವಂಗತರಾಗಿರುವ ಶ್ರೀ ಎಸ್. ಪುಟ್ಟಸ್ವಾಮಿಯವರು ನಾಲ್ಕು ಬಾರಿ ವಿಧಾನಸಭೆಗೆ ಚುನಾಯಿತರಾಗಿ ಈ ರಾಜ್ಯದಲ್ಲಿ ಉತ್ತಮ ವಕೀಲರಾಗಿ ತಮ್ಮ ಸೇವೆಯನ್ನು ಸಲ್ಲಿಸುವ ಮೂಲಕ ಆದರ್ಶಪ್ರಿಯರಾಗಿದ್ದ. ಇವರು ನಮ್ಮನ್ನು ಇಂದು ಅಗಲಿರುವುದರಿಂದ ರಾಜಕೀಯ ರಂಗಕ್ಕೆ ನಷ್ಟವಾಗಿದೆ. ಇಂತಹವರ ಒಂದು ಆದರ್ಶ, ರೀತಿ-ನೀತಿಯನ್ನು ನಾವು ಅನುಸರಿಸಿಕೊಂಡು

ಹೋಗುವ ಮೂಲಕ ಇವೊತ್ತು ತಮ್ಮ ಜೀವನವನ್ನೇ ಜನಸೇವೆಗೋಸ್ಕರ ಮುಡಿಪಾಗಿಟ್ಟು ಶ್ರಮಪಟ್ಟು ಕೆಲಸ ಮಾಡಿ ಕೊನೆ ದಿವಸದಲ್ಲಿ ನಿಧನರಾದಾಗ ನಿಜವಾಗಿಯೂ ಅವರು ಅನೇಕ ಜನರಿಗೆ ಒಳ್ಳೆಯ ಕೆಲಸ ಮಾಡಿರುತ್ತಾರೆ. ಅವೊತ್ತು ಜನರ ಮನಸ್ಸಿನಲ್ಲಿ ನಿಜವಾಗಿಯೂ ಅನಿಸುತ್ತದೆ. ಅತ್ಯುತ್ತಮ ನಾಯಕರನ್ನು ಕಳೆದುಕೊಂಡಿದ್ದೇವೆ, ಅವರು ಅನೇಕ ಬಡಜನರಿಗೆ ಹಾಗೂ ಸಾಮಾನ್ಯ ಜನರಿಗೆ ಸಹಾಯ ಮಾಡಿದಂಥ ಶಾಸಕರಾಗಿದ್ದ ಅಂತಹ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆಂದು ಸಮಾಜದಲ್ಲಿ ಲೋಕರೂಢಿಯಾಗಿ ಆಡುವಂಥ ಪರಿಸ್ಥಿತಿ ಇದೆ. ಅದರಲ್ಲೂ ನಾವು ಶಾಸಕರಾಗಿ ಇಲ್ಲಿ ಏನು ಕೆಲಸ ಮಾಡಿರುತ್ತೇವೆ, ಇನ್ನು ಮುಂದೆ ಪ್ರತಿಯೊಬ್ಬರೂ ಕೂಡ ಅವರ ನಿಜವಾದ ಸೇವೆಯನ್ನು ಸ್ಮರಿಸುವುದು ನಮ್ಮ ಸಂಸ್ಕೃತಿ, ಪರಂಪರೆಗೆ ಮೊಟ್ಟಮೊದಲನೆಯ ದಾರಿಯಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಪಂಪಾಪತಿಯವರು ವಿಧಾನಸಭೆಯ ಸದಸ್ಯರಾಗಿ 1927ನೇ ಇಸವಿಯಲ್ಲಿ ಅಂದರೆ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ರಾಜಕಾರಣಕ್ಕೆ ಬಂದವರು. ಅವರು ಈ ರಾಜ್ಯದ ಪ್ರಜೆಗಳಿಗೆ ಮತ್ತು ರಾಜ್ಯಾಂಗಕ್ಕೆ ನೀಡಿರುವ ಸೇವೆ ಉತ್ತಮವಾಗಿದೆ. ಅವರು ಒಬ್ಬ ಕಾರ್ಮಿಕ ನಾಯಕರಾಗಿ ಅನೇಕ ಸಂಘಟನೆಗಳಲ್ಲಿ ಕಾರ್ಯನಿರ್ವಹಿಸಿ ಕಾರ್ಮಿಕರ ಹಿತಚಿಂತನೆ ನಡೆಸಿ ಅವರಿಗೆ ಅನುಕೂಲ ಮಾಡಿಕೊಟ್ಟಂಥ ಉತ್ತಮ ಶಾಸಕರಾಗಿದ್ದರು. ಅಂತಹವರು ಇವೊತ್ತು ಕೊನೆಯುಸಿರೆಳೆದಿರುವುದು ರಾಜಕೀಯ ಕ್ಷೇತ್ರಕ್ಕಾಗಿರುವ ನಷ್ಟವೆಂದು ಹೇಳುತ್ತಾ ಪರಮಾತ್ಮನು ಅವರ ಆಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕೊಡಲೆಂದು ಹಾಗೂ ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ದೇವರಲ್ಲಿ ಪ್ರಾರ್ಥಿಸಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಸಭೆಯ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಸದನವು ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಿತು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

2. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಮೂಲಕ ನೀಡಲಾದ ಉತ್ತರಗಳು

ಕುಂದಾಪುರ ತಾಲ್ಲೂಕಿನ ಶಿರೂರು ಅಳಿವೆಯಲ್ಲಿ ಸರ್ಕಾರಿ ಮಂಜುಗೆಡ್ಡೆ ಕಾರ್ಖಾನೆ ಕುರಿತು

41 (141) - ಶ್ರೀ ಗೋಪಾಲ್ ಪೂಜಾರಿ. ಕೆ. (ಬೈಂದೂರು) ಮಾನ್ಯ ಶ್ರೀ ಮೀನುಗಾರಿಕೆ ಹಾಗೂ ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಶಿರೂರು ಅಳಿವೆಯಲ್ಲಿ ಸರ್ಕಾರಿ ಮಂಜುಗೆಡ್ಡೆ ಕಾರ್ಖಾನೆಯನ್ನು ಇಲಾಖೆಯು ಖಾಸಗಿಯವರಿಗೆ ಗುತ್ತಿಗೆ ನೀಡಿರುವುದು ನಿಜವೇ?